**ಶ್ರೀ ಡಿ.ಕೆ. ಶಿವಕುಮಾರ್** : ತಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ಇದು Oridinance Replacement Bill...

**ಶ್ರೀ ಜಗದೀಶ್ ಶೆಟ್ಟರ್** : ಖಂಡಿತವಾಗಿಯೂ ಪಾಸ್ ಮಾಡೋಣ. ಆದರೆ, ಕೆಲವೊಂದು ಲೋಪದೋಷಗಳು ಇವೆ. ಅವುಗಳನ್ನು ಈ ತಿದ್ದುಪಡಿಯಲ್ಲಿ ಸೇರಿಸಿದರೆ ಒಳ್ಳೆಯದು.

**ಅಧ್ಯಕ್ಷರು** : ಆಯಿತು. ಈ ಬಿಲ್ಲನ್ನು ನಾಳೆ 10-30 ಕ್ಕೇ ಹಾಕಿಕೊಳ್ಳೋಣ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಅವರೇನು ತಿದ್ದುಪಡಿ ತಂದಿದ್ದಾರೆ, ಅದಕ್ಕೆ ಇನ್ನೂ ಕೆಲವು ಸಣ್ಣ ಸಣ್ಣ ತಿದ್ದುಪಡಿ ತಂದರೆ, ಇದು ದೇಶದಲ್ಲಿಯೇ ಮಾದರಿಯಾಗುತ್ತದೆ. ಅದಕ್ಕಾಗಿ ನಾವೂ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸುತ್ತೇವೆ.

**ಅಧ್ಯಕ್ಷರು** : ಇವತ್ತು ನಮ್ಮ ಮುಂದೆ ಸಿ.ಇ.ಟಿ. ವಿಷಯ ಇದೆ, ಪ್ರಶ್ನೋತ್ತರ ಇದೆ. ಆಮೇಲೆ ಒಂದೆರಡು ಗಮನ ಸೆಳೆಯುವ ಸೂಚನೆಗಳು ಇವೆ. ಈಗ ಯಾವ ವಿಷಯ ತೆಗೆದುಕೊಳ್ಳೋಣ ಎಂಬುವನ್ನು ಹೇಳಿ. ಪ್ರಶ್ನೋತ್ತರ ಲ್ಯಾಪ್ಸ್ ಆದರೆ, ನಾಳೆ ಹಾಕಿಕೊಳ್ಳುವುದಕ್ಕಾಗುವುದಿಲ್ಲ. ಸಿ.ಇ.ಟಿ.ಗೆ ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ?

**ಶ್ರೀ ಪಿ.ಜಿ.ಆರ್. ಸಿಂಧ್ಯ** : ಸದಸ್ಯರ ಪ್ರಶ್ನೆಗಳು ಲ್ಯಾಪ್ಸ್ ಆಗುವುದು ಬೇಡ. ಇವತ್ತು ಪ್ರಶ್ನೋತ್ತರ ತೆಗೆದುಕೊಂಡು, ನಾಳೆ ಸಿ.ಇ.ಟಿ. ವಿಷಯ ತೆಗೆದುಕೊಳ್ಳಿ.

**ಶ್ರೀ ಜಗದೀಶ್ ಶೆಟ್ಟರ್** : ಒಂದು ಗಂಟೆ ಕಾಲ ಸಿ.ಇ.ಟಿ. ವಿಷಯದ ಮೇಲೆ ಚರ್ಚೆಯಾಗಲಿ, ಅನಂತರ ಪ್ರಶ್ನೋತ್ತರ ತೆಗೆದುಕೊಳ್ಳಲಿ.

**ಅಧ್ಯಕ್ಷರು** : ಆಯಿತು. ಸಿ.ಇ.ಟಿ. ಬಗ್ಗೆ ಒಂದು ಗಂಟೆ ಚರ್ಚೆ ನಂತರ ಪ್ರಶ್ನೋತ್ತರ ತೆಗೆದುಕೊಳ್ಳೋಣ.

## 3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

**ವಿಷಯ: ಸಾಮಾನ್ಯ ಪ್ರವೇಶ ಪರೀಕ್ಷೆಯ ಹಾಗೂ ವೃತ್ತಿ ಶಿಕ್ಷಣ ಶುಲ್ಕ ನೀತಿಯ ಬಗ್ಗೆ ಚರ್ಚೆ.**

**+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ ಕ್ಷೇತ್ರ)** : ಸನ್ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ವೃತ್ತಿ ಶಿಕ್ಷಣ ಶುಲ್ಕ ನೀತಿ ವಿಷಯದ ಬಗ್ಗೆ ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಇದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ನನ್ನ ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು, ಈ ವಿಷಯಗಳಲ್ಲಿ ಬಹಳಷ್ಟು ಜನರಿಗೆ ಇನ್ನೂ ಕೂಡ ಯಾವುದೇ ನಿಶ್ಚಿತವಾದ ಸಂಗತಿ ಗೊತ್ತಾಗಿಲ್ಲ: ಇದು ಏನಾಗುತ್ತದೋ ಎಂಬ ಆತಂಕದಲ್ಲಿಯೇ ಇದ್ದಾರೆ. ನಾನು ಈ ಚರ್ಚೆ ಪ್ರಾರಂಭ ಮಾಡುವುದಕ್ಕೆ ಮುಂಚೆ, ಈ ಚರ್ಚೆಯ ವಿಷಯ ಎಷ್ಟು ಮಹತ್ವ ಎನ್ನುವುದಕ್ಕೋಸ್ಕರ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಲಿಚ್ಚಿಸುತ್ತೇನೆ. ಜುಲೈ 29ನೇ ತಾರೀಖು ಅಂದರೆ ಒಂದು ವಾರದ ಹಿಂದೆ, ಬೆಂಗಳೂರು ನಗರದಲ್ಲಿ ಒಂದು ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ಆಗತಾನೇ ಹುಟ್ಟಿದ ಮಗುವಿನ ಮಾರಾಟದ ಸುದ್ದಿ

ಪ್ರಕಟವಾಗಿದೆ. ಶಿಶು ಮಾರಾಟ ಜಾಲ ಪತ್ತೆ. Police bust baby racket in Bangalore. Nursing Home blames the Receiptionist. New born girl sold in Bangalore for Rs. 70,000. ಎಪ್ಪತ್ತು ಸಾವಿರ ರೂಪಾಯಿಗಳಿಗೆ ಒಂದು ಮಗು ಮಾರಾಟವಾಗತಕ್ಕ ವ್ಯವಸ್ಥೆ ನಮ್ಮ ಹೆಮ್ಮೆಯ ಬೆಂಗಳೂರು ನಗರದಲ್ಲಿದೆಯೆಂದು ಕೇಳಿ, ಪತ್ರಿಕೆಯಲ್ಲಿ ಓದಿ ನನ್ನ ಮನಸ್ಸಿಗೆ ಖೇದವಾಯಿತು. ಈ ರೀತಿಯ ಪ್ರಸಂಗಗಳು ಏಕೆ ಆಗುತ್ತವೆ? ಇದೊಂದು ಅನೈತಿಕ ಕ್ರಿಯೆ. ನವಜಾತ ಶಿಶು ಮಾರಾಟ ಮಾಡತಕ್ಕ ಮಟ್ಟಕ್ಕೆ ಬಂದರೆ ಎಲ್ಲಿಗೆ ನಾವು ತಲುಪುತ್ತೇವೆ? ಇದು ಬರೀ ಅನೈತಿಕ ಮಾತ್ರವಲ್ಲ, ಶ್ರೀಮಂತರಾಗಬೇಕೆಂಬ ಕನಸಿನಿಂದ ಏನು ಹೇಯ ಕೃತ್ಯ ಮಾಡುತ್ತಾರೆ, ಇದನ್ನು ನಾವೆಲ್ಲರೂ ಖಂಡಿಸುತ್ತೇವೆ. ಯಾವುದೇ ಕ್ಷೇತ್ರ ಇರಲಿ. ಶೈಕ್ಷಣಿಕ ಅಥವಾ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿದವರು ಇದನ್ನು ಇನ್‌ವೆಸ್ಟ್‌ಮೆಂಟ್ ಫೀಲ್ಡ್ ಎಂದು ತಿಳಿದುಕೊಂಡಿರುವಂತಿದೆ. ಇದೇರೀತಿ, ಸ್ವಲ್ಪ ದಿವಸಗಳ ಹಿಂದೆ, ಗಂಡುಮಗು ಹುಟ್ಟಿದವರಿಗೆ ಹೆಣ್ಣುಮಗು, ಹೆಣ್ಣುಮಗು ಹುಟ್ಟಿದವರಿಗೆ ಗಂಡುಮಗು ಕೊಟ್ಟಿರುವ ಸಂಗತಿಯೂ ಬಂತು. ಇವತ್ತು ವೈದ್ಯಕೀಯ ಕ್ಷೇತ್ರದಲ್ಲಿ ಈ ರೀತಿಯ ಪಿಡುಗು ಬಂದಿದೆ. ಏನಾದರೂ ಮಾಡಿ ನಾನು ಶ್ರೀಮಂತನಾಗಬೇಕು ಅಥವಾ ನಾನು ವಿದ್ಯಾಭ್ಯಾಸ ಮಾಡುವುದಕ್ಕೆ ಮತ್ತು ನರ್ಸಿಂಗ್ ಹೋಮ್ ಮಾಡುವುದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡಿದ್ದೇನೆ. ಇದನ್ನು ವಾಪಸ್ ಪಡೆಯಬೇಕೆಂಬ ಹೇಯ ವಿಚಾರ ಸಮಾಜದಲ್ಲಿ ಬರುವುದಕ್ಕೆ ಶುರುವಾಗಿದೆ. ಇವತ್ತು, ಸಿ.ಇ.ಟಿ. ಮತ್ತು ವೃತ್ತಿ ಶಿಕ್ಷಣ ಶುಲ್ಕ ನೀತಿ ವಿಚಾರಕ್ಕೆ ಬಂದಾಗ, ನಮ್ಮ ರಾಜ್ಯಸರ್ಕಾರದ ಕೃಪೆಯಿಂದ ಅಥವಾ ರಾಜ್ಯಸರ್ಕಾರದ ಒಂದುರೀತಿಯ ಸಂವೇದನಾರಹಿತ ನಡವಳಿಕೆಯಿಂದ ವೈದ್ಯಕೀಯ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕ ಪರಿಸ್ಥಿತಿ ಬಂದಿದೆ. ಅವರು ಮುಂದೆ ಯಾವ ರೀತಿ ದುಡ್ಡು ಸಂಪಾದಿಸಬೇಕು? ಅವರಿಗೂ ಕೂಡ it will be an investment. ಇನ್‌ವೆಸ್ಟ್‌ಮೆಂಟ್ ಮಾಡಿದ ತಕ್ಷಣವೇ ವೈದ್ಯಕೀಯ ಕ್ಷೇತ್ರ ಬಹಳ ಪವಿತ್ರವಾದ ಕ್ಷೇತ್ರವೆಂದು ಭಾವಿಸಿರುವಂತಿದೆ. ಹೀಗಾಗಿ, ವೈದ್ಯಕೀಯ ಪದವಿ ತೆಗೆದುಕೊಂಡ ತಕ್ಷಣ, ಈ ರೀತಿ ಮಾಡಲೇಬೇಕಾದ ಭಾವನೆಯೆನ್ನು ತಾಳುತ್ತಿದ್ದಾರೆ. ಇವತ್ತು ರಾಜ್ಯಸರ್ಕಾರದ ಒಂದುರೀತಿಯ ಅಸಹಾಯಕತೆಯ ಕಾರಣ ಅಥವಾ ಸರ್ಕಾರ ಖಾಸಗಿ ಕಾಲೇಜುಗಳಿಗೆ ಕೊಡತಕ್ಕ ಸಹಾಯದ ಕಾರಣ, ಇತವತು ವೈದ್ಯಕೀಯ ಶಿಕ್ಷಣ ಬಡ ಮತ್ತು ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಕೈಗೆಟುಕದ ಒಂದು ಗಗನ ಕುಸುಮವಾಗಿದೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಶೀಲ್ದಾರ್‌ರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ನನ್ನ ಭಾಷಣ ಕೇಳುವುದಕ್ಕೆ ಈಗ ತಾನೇ ಆಗಮಿಸಿದಂತಹಡಾ. ಪರಮೇಶ್ವರ ಅವರಿಗೆ ಸ್ವಾಗತವನ್ನು ಕೋರುತ್ತಾ, ನನ್ನ ವಿಚಾರವನ್ನು ಮುಂದುವರಿಸುತ್ತೇನೆ. ಇನ್ನು ಮುಂದೆ ಇದೇ ಪದ್ಧತಿ ಮುಂದುವರಿದರೆ, ಬಡವರು ವೈದ್ಯಕೀಯ ಶಿಕ್ಷಣ ಓದುವುದು ಅಸಾಧ್ಯವಾಗುತ್ತದೆ. ಜೊತೆ ಜೊತೆಗೆ, ವೈದ್ಯಕೀಯ ಚಿಕಿತ್ಸೆ ಸಿಕ್ಕುವುದೂ ಬಹಳ ಕಠಿಣವಾಗುತ್ತದೆ. ಅಂದರೆ, ಬಡವರು ಶಿಕ್ಷಣವನ್ನೂ ಪಡೆಯುವುದಕ್ಕಾಗುವುದಿಲ್ಲ, ವೈದ್ಯಕೀಯ ಚಿಕಿತ್ಸೆಯನ್ನೂ ಪಡೆಯುವುದಕ್ಕಾಗುವುದಿಲ್ಲ. ಈ ರೀತಿ

ಮಾಡಿದಾಗ, we will be creating a sort of artificial inflation in the Health Sector. ಆರೋಗ್ಯ ಕ್ಷೇತ್ರದಲ್ಲಿ ಒಂದು ಕೃತಕವಾದ ಇನ್‌ಫ್ಲೇಷನ್ ಸೃಷ್ಟಿ ಮಾಡುವುದಕ್ಕೆ ನಾವು ಹೋಗುತ್ತಿದ್ದೇವೆ. ಇದರಿಂದ ಸಮಾಜಕ್ಕೆ ಬಹಳ ದೊಡ್ಡ ರೀತಿಯ ಅಪಾಯ ಕಾದಿದೆ. ಇವತ್ತು ಫೀ ಸ್ಟ್ರಕ್ಚರ್ ನಮ್ಮ ಮುಂದೆ ಇದೆ. ಇದು ನ್ಯಾಯಾಲಯಕ್ಕೂ ಹೋಗಿದೆ. ಈ ಫೀ ಸ್ಟ್ರಕ್ಚರ್ ನೋಡಿದರೆ, ಒಬ್ಬ ಮಧ್ಯಮವರ್ಗದ ವ್ಯಕ್ತಿಯಾಗಿ ನನಗೆ ಗಾಬರಿಯಾಗುತ್ತದೆ.

**ಉಪಾಧ್ಯಕ್ಷರು** : ಕೊನೇ ಬೆಂಚಿನಲ್ಲಿ ಕುಳಿತಿರುವ ಸದಸ್ಯರುಗಳು ಮಾತನಾಡಬಾರದು. ಒಂದುವೇಳೆ, ನೀವು ಮಾತನಾಡುವಹಾಗೆ ಇದ್ದರೆ, ಪಕ್ಕದ ಲಾಂಜ್‌ನಲ್ಲಿ ಕುಳಿತು ಮಾತನಾಡಿ. ದಯವಿಟ್ಟು, ಅಲ್ಲಿರುವವರು ತಮ್ಮ ತಮ್ಮ ಸೀಟುಗಳಿಗೆ ಹೋಗಿ.

**ಶ್ರೀ ಎಸ್. ಸುರೇಶ್ ಕುಮಾರ್** : ಇವೊತ್ತು ರಾಜ್ಯ ಸರಕಾರ ಏನೊಂದು ಶುಲ್ಕವನ್ನು ನಿಗದಿ ಮಾಡಿದೆ. ಆ ಶುಲ್ಕದ ಪ್ರಮಾಣವನ್ನು ನೋಡಿದರೇನೇ ಯಾರಿಗಾದರೂ ಕೂಡ ಗಾಬರಿಯಾಗುತ್ತದೆ. ವೈದ್ಯಕೀಯ ಶಿಕ್ಷಣ, ಕಳೆದ ವರ್ಷ ಇದ್ದುದ್ದು 16,200 ರೂ.ಗಳು. ಅನುದಾನ ರಹಿತ ಕಾಲೇಜುಗಳಲ್ಲಿ ಕರ್ನಾಟಕದ ಮೆರಿಟ್ ವಿದ್ಯಾರ್ಥಿಗಳು ತುಂಬಬೇಕಾದ ಶುಲ್ಕ ಹೋದವರ್ಷ ಇದ್ದುದ್ದು 16,200 ರೂ.ಗಳು. ಈ ವರ್ಷದಲ್ಲಿ ನಾವು ಫಿಕ್ಸ್ ಮಾಡಿರುವುದು 1,97,000–00 ರೂ.ಗಳು.

**ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)** : ಈ ಶುಲ್ಕವನ್ನು ರಾಜ್ಯ ಸರಕಾರದವರು ನಿಗದಿ ಮಾಡಿದ್ದು ಎಂದು ಹೇಳಿದ್ದೀರಿ. ಇದು ರಾಜ್ಯ ಸರಕಾರ ನಿಗದಿ ಮಾಡಿದ್ದು ಅಲ್ಲ. ಹೈಕೋರ್ಟ್‌ನಲ್ಲಿ ನಿಗದಿ ಮಾಡಿದ್ದು.

**ಶ್ರೀ ಎಸ್. ಸುರೇಶ್ ಕುಮಾರ್** : ಹೈಕೋರ್ಟ್‌ಗಿಂತ ಮುಂಚೆ ಏನಾಯಿತು ಸ್ವಾಮಿ?

**ಡಾ: ಜಿ. ಪರಮೇಶ್ವರ್** : ರಾಜ್ಯ ಸರಕಾರ ಏನು ಪ್ರೊಪೋಸ್ ಮಾಡಿದೆ ಎಂಬುದು ಮುಖ್ಯ. ಹೈಕೋರ್ಟ್‌ಗೆ ರಾಜ್ಯ ಸರಕಾರ ಏನು ಹೇಳಿತ್ತು ಎನ್ನುವುದು ಕೂಡ ಮುಖ್ಯ. ಗೊಳಿದಂತೆ ತಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಹೇಳುತ್ತೇನೆ.

**ಶ್ರೀ ಎಸ್. ಸುರೇಶ್ ಕುಮಾರ್** : ಹೈಕೋರ್ಟ್ ಏಕೆ ನಿಗದಿ ಮಾಡಿತು ಎಂಬುದನ್ನು ಕೂಡ ನಾನು ಹೇಳುತ್ತೇನೆ. ಆ ಬಗ್ಗೆ ತಾವು ಉತ್ತರ ಕೊಡುವಾಗ ಹೇಳಿ, ಸಮಾಧಾನವಾದರೆ ಇಲ್ಲಿಯೇ ಕುಳಿತುಕೊಳ್ಳುತ್ತೇವೆ, ಇಲ್ಲವಾದರೆ... ಈಗ ನೀವು ನಿಗದಿ ಮಾಡಿದ ಶುಲ್ಕ 1.97,000–00ರೂ.ಗಳು. ಅಂದರೆ, ಸುಮಾರು 13 ಪಟ್ಟು ಜಾಸ್ತಿ ಸ್ವಾಮಿ. ಇನ್ನು ದಂತ ವೈದ್ಯಕೀಯ. ಇದಕ್ಕೆ 13,900–00 ರೂ.ಗಳು ಕಳೆದ ವರ್ಷ ಇತ್ತು. ಇವೊತ್ತು ಅದು 1,17,000–00 ರೂ.ಗಳು ಆಗಿದೆ. ಇದು ಎಂಟು ಪಟ್ಟು ಹೆಚ್ಚು. ಇನ್ನು ಇಂಜಿನಿಯರಿಂಗ್ ವಿಚಾರ. ಹೋದ ವರ್ಷದಲ್ಲಿ 8,590–00 ರೂ.ಗಳು ಇತ್ತು. ಈಗ ಆಗಿರುವುದು 38,590–00 ರೂ.ಗಳು. ಅದು ಸುಮಾರು 4.5 ಪಟ್ಟು ಹೆಚ್ಚು. ಈ 1,97,000–00 ರೂ.ಗಳು ಅಂದರೆ ಹತ್ತಿರ ಹತ್ತಿರ ಎರಡು ಲಕ್ಷ ರೂ.ಗಳು ಆದುವು. ಒಂದು ವರ್ಷಕ್ಕೆ ಸುಮಾರು ಎರಡು ಲಕ್ಷ ರೂ.ಗಳನ್ನು ಕೊಡುವ ಪರಿಸ್ಥಿತಿ ನಾವೆಲ್ಲಾ ಊಹೆ ಮಾಡಿಕೊಂಡರೆ, ನಿಜವಾಗಿಯೂ ಕೂಡ ಅರ್ಹತೆ ಇದ್ದರೂ ಕೂಡ, ತಲೆಯಲ್ಲಿ ಬುದ್ಧಿ ಇದ್ದರೂ ಕೂಡ ಜೇಬಿನಲ್ಲಿ ದುಡ್ಡು ಇಲ್ಲದೆ ಇರುವವರು ಮೆಡಿಕಲ್ ಓದುವುದಕ್ಕೆ ಆಗುತ್ತದೆಯೇ? ಅಪ್ಪಿತಪ್ಪಿ ಮನೆಯಲ್ಲಿ ಇಬ್ಬರು

ಅಂದರೆ ಅಕ್ಕತಂಗಿಯೋ, ಅಣ್ಣತಮ್ಮನೋ ಇದ್ದು, ಇಬ್ಬರಿಗೂ ಕೂಡ ತಲೆಯಲ್ಲಿ ಬುದ್ಧಿ ಇದ್ದು ಅವರ ಅಪ್ಪನ ಜೇಬಿನಲ್ಲಿ ಹಣ ಇಲ್ಲವೆಂದರೆ ಇಬ್ಬರಂತೂ ಖಂಡಿತ ಮೆಡಿಕಲ್ ಓದುವುದಕ್ಕೆ ಆಗುವುದಿಲ್ಲ. ಒಂದು ರೀತಿಯಲ್ಲಿ ಮಧ್ಯಮವರ್ಗದವರಿಗಂತೂ ಇದು ಕೈಗೆಟಕದ ಕುಸುಮವಾಗಿದೆ. ನಮ್ಮ ರಾಜ್ಯದ ಪರಿಸ್ಥಿತಿ ಪ್ರಾಯಶಃ ಇಡೀ ದೇಶದಲ್ಲಿ ಒಂದು ರೀತಿಯಲ್ಲಿ ಉಲ್ಲೇಖಾರ್ಹ ಪರಿಸ್ಥಿತಿಯಾಗಿದೆ. ಇದನ್ನು ಚರಿತ್ರೆಯಲ್ಲಿ ನಾವು ಇವೊತ್ತು ಇರುವ ಪರಿಸ್ಥಿತಿಯನ್ನು ಬರೆದಿಡಬೇಕು. ಹೇಗೆ? Common Entrance Test organisation is headed by whom? C.E.T. organisation ಏನಿದೆ ಅದರ ನಂತರದ ಹೆಡ್ ಎಂದರೆ, ನನ್ನ ಪ್ರಕಾರ ಒಬ್ಬರು ಮ್ಯಾನೇಜ್‌ಮೆಂಟ್ ಪರ್ಸ್‌ನ್. A Management person, who is incidentally a Congress Leader and also a Minister. ಅವರು ನಮಗೆ ಇವೊತ್ತು ಸಿಇಟಿ ಎಂದೆ ತತ್‌ಕ್ಷಣ ಜ್ಞಾಪಕಕ್ಕೆ ಬರುವುದು. ಮತ್ತು ಅದನ್ನು ಅಪೋಸ್ ಮಾಡುತ್ತಾ ಇರುವುವರು ಯಾರು Congress Leaders-predominantly Congress Leaders. who have formed COMED-K. Comed-Karnataka. ಇವರು ಕಾಮೆಡ್--ಕೆ ಇರುವುದು ಯಾರು? ಬಡವರ ಪರವಾಗಿ ಇದ್ದೇವೆ ಎಂದು ಹೇಳುವ ಪಕ್ಷದ ನಾಯಕರು ಇವೊತ್ತು ಬಡವರ ವಿರುದ್ಧ ಇದ್ದಾರೆ. ಅವರು ಸಿಇಟಿ ವಿರುದ್ಧ ಮಾಡುವ ಸ್ಟೇಟ್ ಮೆಂಟ್ ಮತ್ತು ಮಾತುಗಳನ್ನು ನಾವು ನೋಡುತ್ತಾ ಬಂದಿದ್ದೇವೆ. Ad nauseum ನಮಗೆ ಬೇಜಾರು ಆಗುವಷ್ಟು ನಾವು ಇವೊತ್ತು ನೋಡಿಕೊಂಡು ಬಂದಿದ್ದೇವೆ. ಹೈಕೋರ್ಟ್‌ನಲ್ಲಿ who appeared for comed-k in the High Court of Karnataka? Mr. Kapil Sibal, an Excellent Jurist of this land. xx ಅವರು ಇವೊತ್ತು ಹೈಕೋರ್ಟ್‌ನಲ್ಲಿ ಅಪಿಯರ್ ಆದರು. ಚೆನ್ನಾಗಿದೆಯಲ್ಲವೇ? ಕಾಂಗ್ರೆಸ್, ಕಾಂಗ್ರೆಸ್, ಅಪಿಯರ್ ಆದವರೂ ಕಾಂಗ್ರೆಸ್. ಇಂಥ ಪರಿಸ್ಥಿತಿ ಪ್ರಾಯಶಃ ಇಡೀ ದೇಶದಲ್ಲಿಯೇ ಎಲ್ಲಿಯೂ ಕೂಡ ಇರಲಿಕ್ಕೆ ಸಾಧ್ಯವಿಲ್ಲ. ಇದನ್ನು ನಾವು...

**ಶ್ರೀ ಡಿ.ಬಿ. ಚಂದ್ರೇಗೌಡ (ಸಂಸದೀಯ ಕಾನೂನು ಸಚಿವರು)** : ಮಾನ್ಯ ಉಪಾಧ್ಯಕ್ಷರೇ, He is a Member of one House and is an Advocate practising. The party he belongs. you cannot club together.

**ಶ್ರೀ ಎಸ್. ಸುರೇಶ್ ಕುಮಾರ್** : ನಾನು ಅವರು ಅಪೀಯರ್ ಆಗುವುದು ತಪ್ಪು ಎಂದು ಹೇಳುತ್ತಾ ಇಲ್ಲ I am not questioning ನಾನು ಅದನ್ನು ಕ್ವೆಶ್ಚನ್ ಮಾಡುತ್ತಾ ಇಲ್ಲ. ಆದರೆ ಇರುವ ಒಂದು ಪರಿಸ್ಥಿತಿಯನ್ನು ಜನ ನೋಡಿದಾಗ, ಟೀವಿಯಲ್ಲಿ ಜನರು ಕಪೀಲ್ ಸಿಬಾಳ್ ರವರನ್ನು ನೋಡುತ್ತಾ ಇರುತ್ತಾರೆ. ಅವರು ಬಂದು ಆ ಕಾಂಗ್ರೆಸ್‌ನ್ನು ಡಿಫೆಂಡ್ ಮಾಡಿ, ಮಾತನಾಡುವುದು. ಎಲ್ಲವನ್ನೂ ಕೂಡ. ಅವರು ಇಲ್ಲಿಗೆ ಬಂದು ಕಾಮೆಡ್--ಕಿ ಗೆ ಅಪಿಯರ್ ಆಗುತ್ತಾರೆ. ರಾಜ್ಯ ಸರಕಾರದ ಪಾಲಿಸಿಗಳನ್ನು ಅವರು ಅಪೋಸ್ ಮಾಡಿ ಮಾತನಾಡುತ್ತಾ ಇರುತ್ತಾರೆ.

---

xx ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಇದು ಜನಸಾಮಾನ್ಯರಿಗೆ ಏನು ಅನ್ನಿಸುತ್ತದೆ? ನಾನು ಆ ಜನಸಾಮಾನ್ಯರ ಭಾವನೆಗಳನ್ನು ತಮ್ಮ ಮುಂದಿಡುತ್ತಾ ಇದ್ದೇನೆ. ನಾನು Who am I? ಕಪೀಲ್‌ಸಿಬಾಲ್‌ರವರಿಗೆ ಪ್ರ್ಯಾಕ್ಟೀಸ್ ಮಾಡಬೇಡಿ, ಇಲ್ಲಿಗೆ ಬರಬೇಡಿ ಎಂದು ಹೇಳಲು ನಾನು ಯಾರು ಅಥವಾ ನಾನು ಹೇಳಿದರೂ ಕೂಡ ಅವರು ಕೇಳುವುದಿಲ್ಲ.

**ಶ್ರೀ ಡಿ.ಬಿ. ಚಂದ್ರೇಗೌಡ** : ನೀವು ಕಪೀಲ್‌ಸಿಬಾಲ್‌ರವರನ್ನು ಇವೊತ್ತು ಅರೆಸ್ಟ್ ಮಾಡಿದ ವಕೀಲರಿಗೆ ಹೋಲಿಸುತ್ತೀರೇನು? A man of his calibre. You must have some comparison...

**ಶ್ರೀ ಎಸ್. ಸುರೇಶ್ ಕುಮಾರ್** : ಅದು ನನಗೆ ಗೊತ್ತಿಲ್ಲ. ಅದು ನಮ್ಮ ಮನಸ್ಸಿನಲ್ಲಿಲ್ಲದಿರುವ ವಿಚಾರವನ್ನು....

**Sri D.B. Chandre Gowda :** You should not bring his name here. He is an Advocate practising in the Supreme Court, a very senior counsel.. How can you bring his name here?

**ಶ್ರೀ ಎಸ್. ಸುರೇಶ್ ಕುಮಾರ್** : ನಾನೇನು ಮಾಡಿದ್ದೇನೆ? ನಾನು ಅವರನ್ನು ಹೊಗಳಲಿಲ್ಲವೆ?

**Sri D.B. Chandre Gowda :** He is not there in this Houde to defend.

**Sri S. Suresh Kumar :** He has appeared against the Government.

**ಶ್ರೀ ಡಿ.ಬಿ. ಚಂದ್ರೇಗೌಡ** : ವಿರುದ್ಧವಾಗಿಯಾದರೂ ಆಗಲಿ, ಪರವಾಗಿಯಾದರೂ ಆಗಲಿ, ಮಾನ್ಯ ಉಪಾಧ್ಯಕ್ಷರೆ, ತಾವು ಈ ತರಹ ಚರ್ಚೆಗೆ ಅವಕಾಶ ಕೊಡಬಾರದು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. He is a hon. member of the Rajya Sabha. You cannot bring his name here.

**ಶ್ರೀ ಎಸ್. ಸುರೇಶ್‌ಕುಮಾರ್** : ಮಾನ್ಯ ಉಪಾಧ್ಯಕ್ಷರೆ, ಹೀಗೆಂದರೆ ಏನು? ದಯವಿಟ್ಟು ನಾನು ಮಾತನಾಡುವುದಿಲ್ಲ.

**ಶ್ರೀ ಜಗದೀಶ್ ಶೆಟ್ಟರ್** : ಸಿಇಟಿ ಬಗ್ಗೆ ಪ್ರಶ್ನೆ ಬಂದಂಥ ಸಂದರ್ಭದಲ್ಲಿ, ಹೈಕೋರ್ಟ್‌ನಲ್ಲಿ ಆ ಕುರಿತು ಕೇಸ್ ಬಂದಂಥ ಸಂದರ್ಭದಲ್ಲಿ ಯಾರು ಅಪಿಯರ್ ಆಗಿದ್ದಾರೆ ಎಂದು ಹೇಳುವ ಹಾಗೂ ಇಲ್ಲವೆ?

**ಶ್ರೀ ಡಿ.ಬಿ. ಚಂದ್ರೇಗೌಡ** : ಅಪಿಯರ್ ಯಾರು ಆದರು ಎನ್ನುವ ಪ್ರಶ್ನೆ ಬೇರೆ. This is all my objection. (interruptions)

**ಉಪಾಧ್ಯಕ್ಷರು** : ಹೇಳಬಾರದೆಂದೇನೂ ಇಲ್ಲ. ಆದರೆ ಹೇಳುವ ಧಾಟಿ ಮಾತ್ರ ಸ್ವಲ್ಪ ಪಂಚ್ ಮಾಡುತ್ತದೆ.

ಗೊಂದಲ

**ಶ್ರೀ ಡಿ.ಬಿ. ಚಂದ್ರೇಗೌಡ** : ನಾನು ನಿಮಗೆ ಹೀಗೆಯೇ ಮಾತನಾಡಿ ಎಂದು ಹೇಳಲಿಲ್ಲ. ಆದರೆ ಯಾರು ಈ ಸದನದ ಸದಸ್ಯರು ಅಲ್ಲವೋ ಅವರ ಹೆಸರನ್ನು ಇಲ್ಲ ತೆಗೆದುಕೊಳ್ಳುವ ಅವಕಾಶ ಇಲ್ಲಿ ಇಲ್ಲ. ಅವರ ಹೆಸರನ್ನು ಇಲ್ಲಿ ತರಬೇಡಿ.

**ಶ್ರೀ ಬಿ. ಸೋಮಶೇಖರ್** : ಮಾನ್ಯ ಉಪಾಧ್ಯಕ್ಷರೆ, ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಬಹಳ ಅನುಭವಸ್ಥರು. ನಾನು ಅದೇ ವಿಚಾರವನ್ನು ಮಾತನಾಡಬೇಕೆಂದಿದ್ದೆ. ಇವರು ಹೇಳತಕ್ಕಂಥಾದ್ದು ಅವರು ಅಪಿಯರ್ ಆಗಬಾರದು, ಆಗಬೇಕು ಎಂದು ಅಲ್ಲ. It is a question of moral propriety. How this Government has committed impropriety in dealing this issue. ಅವರು ಅಷ್ಟನ್ನೇ ಹೇಳಿದ್ದಾರೆಯೇ ಹೊರತು ಅದನ್ನು ತಾವು.

**Dr. G. Parameswar :** This is going too far. would you please explain that? What do you mean by impropriety? ಈ ಸರಕಾರ impropriety ಮಾಡಿರತಕ್ಕಂಥಾದ್ದು ಏನು ಎಂಬುದನ್ನು ದಯಮಾಡಿ ಹೇಳಿ. You cannot just make a statement like that.

**Sri B. Somashekar :** Moral Propriety ಅಲ್ಲದಿರುವುದೆಲ್ಲಾ impropriety.

**Dr. G. Parameshwar :** What is moral propriety? Explain/

**Sri B. Somashekar :** We cannot explain moral impropriety.

**Dr. G. Parameswar :** You cannot make a statement like this.

**Sri B. somashekhar :** Morality comes from within.

ಗೊಂದಲ

**ಶ್ರೀ ಬಿ. ಸೋಮಶೇಖರ್** : ನೈತಿಕತೆ ಎನ್ನುವುದರ ಬಗ್ಗೆ ವಿವರಣೆಯನ್ನು ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಡಿ.ಬಿ. ಚಂದ್ರೇಗೌಡ** : ನೈತಿಕತೆ ಎನ್ನುವುದರ ಬಗ್ಗೆ ನೀವು ಮಾತನಾಡಿ, ನೀವು ಸರಕಾರವನ್ನು ಛೇಡಿಸುವ ಹಕ್ಕನ್ನು ಹೊಂದಿದ್ದೀರಿ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಸದನದ ಸದಸ್ಯರು ಅಲ್ಲದೇ ಇರುವವರನ್ನು .. ಯಾರೋ ಒಂದು ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ನಡೆಸುತ್ತಾರೆ, ಅಂದರೆ ಅವರು ಕಾಂಗ್ರೆಸ್ ಪಕ್ಷದವರು ಆಗಬಾರದೇ? ಬಿಜೆಪಿಯವರು ನಡೆಸುತ್ತಿದ್ದಾರೆ ಎಂದು ನಾವೇನು ಅಂದಿದ್ದೇವೆಯೇ? ಅದು ಇಂಪ್ರೊಪ್ರೈಟಿ ಹೇಗೆ ಆಗುತ್ತದೆ? ಕಪಿಲ್ ಸಿಬಾಲ್‌ರವರು One of the greatest Jurists of this country. ಅವರ ಹೆಸರನ್ನು ನೀವೇಕೆ ಇಲ್ಲಿ ತರುತ್ತೀರಿ?

**ಶ್ರೀ ಬಿ. ಸೋಮಶೇಖರ್** : 1988ರಲ್ಲಿ I was one of the Trustees of an Educational Institution. Some allegations were made against this institution wherein I was one of the Trustees. It was referred to Lokayukta. Immediately I resigned taking the moral responsibility. That is moral propriety. ನೀವಿದ್ದರೋ ಗೊತ್ತಿಲ್ಲ. ಅಷ್ಟೇ ಇನ್ನೇನಿಲ್ಲಿ. I took a stand...

## 5.10 ಪಿಎಂ

**ಶ್ರೀ ಡಿ.ಬಿ. ಚಂದ್ರೇಗೌಡ** : ಯಾರ ಮೇಲೂ ಇಂತಹ ಆಪಾದನೆ ಮಾಡಿಲ್ಲವಲ್ಲಾ.

**ಉಪಾಧ್ಯಕ್ಷರು** : ಆಯಿತು, ಮಾತನಾಡಿ.

**ಶ್ರೀ ಎಸ್. ಸುರೇಶ್ ಕುಮಾರ್** : ನನಗೆ ಚಂದ್ರೇಗೌಡರಷ್ಟು ಖಂಡಿತ ಅನುಭವ ಇಲ್ಲ. ಆದರೆ ಈ 9 ವರ್ಷದಲ್ಲಿ ಏನು ಹೇಳಬೇಕು ಏನು ಹೇಳಬಾರದು ಎಂಬುದನ್ನು ಕಲಿತಿದ್ದೇನೆ. ಅದನ್ನು ನೀವೂ ಕೂಡ observe ಮಾಡಿದ್ದೀರಿ ಅಂತ ಕಾಣುತ್ತದೆ. ಅಷ್ಟು ಮಾತ್ರ ನಾನು ಹೇಳಿದರೆ ದಯವಿಟ್ಟು ಟಾಲರೇಟ್ ಮಾಡಿ; ಆಮೇಲೆ ಉತ್ತರ ಕೊಡಿ.

**Sri D.B. Chandre Gowda :** Those persons who are not members of this House who cannot defend himself, ಅವರ ಹೆಸರು ತರುವುದಕ್ಕೆ ನಮ್ಮ ವಿಧಿವಿಧಾನದಲ್ಲಿ ಅವಕಾಶ ಇಲ್ಲ ಅಷ್ಟೇ.

**ಶ್ರೀ ಜಗದೀಶ್ ಶೆಟ್ಟರ್** : ಈ ಸದನದ ಹೊರಗಿನ ಯಾರ ಮೇಲಾದರೂ ಆಪಾದನೆ ಮಾಡಿದರೆ ಅವರು defend ಮಾಡಿಕೊಳ್ಳಲು ಆಗುವುದಿಲ್ಲ ನಿಜ ಆದರೆ....

**ಶ್ರೀ ಡಿ.ಬಿ. ಚಂದ್ರೇಗೌಡ** : ಆಪಾದನೆ ಅಲ್ಲವೇ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾರೆ ಎಂಬುದು?

**ಶ್ರೀ ಎ. ರಾಮದಾಸ್** : ಬೆಳಿಗ್ಗೆ ಮುಖ್ಯಮಂತ್ರಿಗಳು ಸೋನಿಯಾ ಗಾಂಧಿಯವರ ಹೆಸರು ಏಕೆ ಹೇಳಿದರು?

**ಶ್ರೀ ಬಿ.ಎಚ್. ಬನ್ನಿಕೋಡ್** : ಉಪಾಧ್ಯಕ್ಷರೇ, ವಕೀಲರಾಗಿ ವಕೀಲಿಕೆ ಮಾಡಿದರು ಅಂತ ಹೇಳಿದ್ದಕ್ಕೆ ತಕರಾರೇನಿಲ್ಲ, ಲೋಕಸಭೆ, ರಾಜ್ಯ ಸಭೆ ಸದಸ್ಯರನ್ನು, ಈ ಸಭೆ ಸದಸ್ಯರಲ್ಲದವರ ಬಗ್ಗೆ ಹೇಳಿಕೆ ಟೀಕೆ ಚರ್ಚೆ ಮಾಡಲು ಅವಕಾಶ ಇಲ್ಲ.

**ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ** : ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಮಾತನಾಡುವಾಗ ಸೋನಿಯಾ ಗಾಂಧಿಯವರ ಹೆಸರು ಹೇಳಿದರು. ಹಾಗಾದರೆ ಅವರ ಹೆಸರು ಏಕೆ ಹೇಳಿದರು? ಸೋನಿಯಾಗಾಂಧಿಯವರ ಹೆಸರು ಹೇಳಲು ಮಾತ್ರ ನಿಮಗೆಲ್ಲಾ ಸಂತೋಷ. ಇವರು ಸಂಬಂಧಪಟ್ಟ ವಕೀಲರ ಹೆಸರು ಹೇಳಿದರೆ ನಿಮಗೇನು ತೊಂದರೆ? ಮಾನ್ಯ ಮುಖ್ಯಮಂತ್ರಿಗಳು ಸೋನಿಯಾಗಾಂಧಿಯವರ ಹೆಸರು ಹೇಳಬಾರದಾಗಿತ್ತು. ಅವರು ಈ ಮನೆ ಸದಸ್ಯರಲ್ಲ.

**ಶ್ರೀ ಡಿ.ಬಿ. ಚಂದ್ರೇಗೌಡ** : ನೀವು ಆ ತಕ್ಷಣ object ಮಾಡಬೇಕಾಗಿತ್ತು, ನೀವೇನು ಮಾಡುತ್ತಿದ್ದಿರಿ?

**ಶ್ರೀ ಕೆ.ಎಂ. ಶ್ರೀನಿವಾಸಗೌಡ ಕುಡುವನಹಳ್ಳಿ** : ಅದಕ್ಕೆ ನಾವು ಮಾಡಲಿಲ್ಲವಲ್ಲಾ ಬೇರೆ ಯಾರೂ ಅಲ್ಲ ಮುಖ್ಯಮಂತ್ರಿಗಳೇ...

**ಶ್ರೀ ಡಿ.ಬಿ. ಚಂದ್ರೇಗೌಡ** : ನಮಗೆ ಗೊತ್ತಿಲ್ಲ. it is not the subject before the House.

**ಶ್ರೀ ಕೆ.ಎಂ. ಶ್ರೀನಿವಾಸಗೌಡ (ಕುಡುವನಹಳ್ಳಿ)** : ಮತ್ತೆ ಒಬ್ಬ ಸದಸ್ಯರು ಮಾತನಾಡುವಾಗ ನೀವು ಅವರ ಹೆಸರು ಹೇಳಬಾರದು ಅವರ ಪಕ್ಷ ಹೇಳಬಾರದು, ಅವರೂ ಪಕ್ಷದ ಸದಸ್ಯರಿದ್ದಾರೆ ವಕೀಲರಿದ್ದಾರೆ ವಕೀಲರು ನೇರವಾಗಿ ಈ ಕೇಸಿಗೆ ಅಪಿಯರ್ ಆಗಿದ್ದಾರೆ, ಅವರು ನಿಮ್ಮ ಸದಸ್ಯರಿದ್ದು ನಿಮ್ಮ ಸರ್ಕಾರದ ಧೋರಣೆಗಳನ್ನು ಒಪ್ಪಿಕೊಂಡಿದ್ದವರು ಇವತ್ತು ಸರ್ಕಾರದ ವಿರುದ್ಧವೇ ಅಲ್ಲಿ ವಕಾಲತ್ತು ಹಾಕಿದ್ದಾರೆ ಅಂದರೆ ಅವರ ಹೆಸರು ಹೇಳಬಾರದು. ಅಂದರೆ ಇದ್ಯಾವ ನ್ಯಾಯ? ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳು ಸೋನಿಯಾಗಾಂಧಿಯವರ ಹೆಸರು ಹೇಗೆ ಹೇಳಿದರು? ಇದನ್ನು ದಯವಿಟ್ಟು ಉಪಾಧ್ಯಕ್ಷರೇ, ಒಂದು ನ್ಯಾಯದ ಎರಡು ಮುಖ....

**ಶ್ರೀ ಡಿ.ಬಿ. ಚಂದ್ರೇಗೌಡ** : ಏನಕೇನ ಪ್ರಕರಣೇನಾ ಅಂತ ಯಾವುದನ್ನೋ ತಂದು ಯಾವುದಕ್ಕೋ ಗಂಟು ಹಾಕಬೇಡಿ. ಆ ತಕ್ಷಣ ಹೇಳಬೇಕಾಗಿತ್ತು. ನಾನು ಹೇಳುತ್ತೇನೆ 327, 328ರಲ್ಲಿ 'ಒಬ್ಬ ವ್ಯಕ್ತಿಯನ್ನು ಕುರಿತು ಆಪಾದನೆ ಬಗ್ಗೆ ಕೈಕೊಳ್ಳಬೇಕಾದ ಕಾರ್ಯವಿಧಾನ....

**ಶ್ರೀ ಜಗದೀಶ್ ಶೆಟ್ಟರ್** : ಒಬ್ಬ ವ್ಯಕ್ತಿ ಬಗ್ಗೆ ಆಪಾದನೆ ಮಾಡಿದರೆ..

**ಶ್ರೀ ಡಿ.ಬಿ. ಚಂದ್ರೇಗೌಡ** : ಅಲ್ಲವೇ? He is a congress party member, Rajyasabha member ಅಂತ ಹೇಗೆ ಹೇಳುತ್ತೀರಿ?

**ಶ್ರೀ ಎಸ್. ಸುರೇಶ ಕುಮಾರ್** : ಕಾಂಗ್ರೆಸ್ ಪಾರ್ಟಿ ಮೆಂಬರ್ ಎಂಬುದು. ಆಪಾದನೆ ಆದರೆ ನಾನೇನು ಮಾಡಲಿ?

**ಶ್ರೀ ಡಿ.ಬಿ. ಚಂದ್ರೇಗೌಡ** : ಕಾಂಗ್ರಸ್ ಸದಸ್ಯರು ಎಂದದ್ದು ಆಪಾದನೆ ಅಲ್ಲ ಅವರನ್ನು ಇಲ್ಲಿ ಪ್ರಸ್ತಾವನೆ ಮಾಡುವುದು ಆಪಾದನೆ.

**ಉಪಾಧ್ಯಕ್ಷರು** : ನಾನು ಅದನ್ನು ನೋಡುತ್ತೇನೆ.

**ಶ್ರೀ ಎಸ್. ಸುರೇಶ್ ಕುಮಾರ್** : ಅಧ್ಯಕ್ಷರೇ, ನಾನೊಂದು ಸ್ಯಾಂಪಲ್ ಕೊಟ್ಟಿದ್ದಕ್ಕೆ ನಿಮ್ಮ ಅಸಹನೆಯ ಸಾಂಪಲ್ ನೀವು ಕೊಟ್ಟಿದ್ದೀರಿ, ಈಗ ಈ corporate world ನಲ್ಲಿ ಬಹಳ ಪ್ರಸಿದ್ಧವಾದ ಒಂದು ಪದ ಇದೆ. conflict of interests ಅಂತ. ಒಬ್ಬ ವ್ಯಕ್ತಿ ಎರಡು ಜವಾಬ್ದಾರಿ ಇದ್ದರೆ ಎರಡು ಆಸಕ್ತಿಗಳಿದ್ದರೆ ಯಾವ ಆಸಕ್ತಿಯನ್ನು ಆತ ಕಾಪಾಡುತ್ತಾನೆ? ಸನ್ಮಾನ್ಯ ಪರಮೇಶ್ವರ್ ಅವರು ಸಿಇಟಿ ಬಗ್ಗೆ he is a sort of regulator. ಅವರು ಇವತ್ತು ರೆಗ್ಯುಲೇಟ್ ಮಾಡುತ್ತಿದ್ದಾರೆ. ಇವತ್ತು ಯಾರು ರೆಗ್ಯುಲೇಟ್ ಮಾಡುತ್ತಿದ್ದಾರೆ ಅವರಿಗೆ ಸಂಬಂಧಪಟ್ಟ ಒಂದು ವೃತ್ತಿಶಿಕ್ಷಣ ಕಾಲೇಜೂ ಇದೆ. ಆ ಕಾಲೇಜ್ ಯಾರಿಂದ ರೆಗ್ಯುಲೇಟ್ ಆಗಬೇಕು? ಯಾವ ರೆಗ್ಯುಲೇಟರ್ ಇದ್ದಾರೋ ಅವರ ಮೂಲಕವೇ ಆಗಬೇಕು. ಇಂತಹ ಸಮಯ ಬಂದಾಗ ಡಾ: ಪರಮೇಶ್ವರರಿಗೆ ನಾನು ಹೋದ ಸಲವೇ ಹೇಳಿದ್ದೆ ಯಾವ ರೋಲನ್ನು ಅವರು ಸರಿಯಾಗಿ ನಿಭಾಯಿಸಲು ಸಾಧ್ಯ? ನನ್ನದೊಂದು humble request, ನಾನು ಅವತ್ತೇ ಹೇಳಿದೆ, I pead with you ಅಂತ, ಇವತ್ತು ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಉಪಮುಖ್ಯಮಂತ್ರಿ ಎಂದು ಮಾಡಿ, ನಾವು ಹೋಗಿ ಹಾರಹಾಕಿ ಅಭಿನಂದಿಸುತ್ತೇವೆ. ಆದರೆ ಸಮಾಜದ ಕಣ್ಣಲ್ಲಿ, he is like a Ceaser's wife, he should be above suspicion, ಅದಕ್ಕೋಸ್ಕರ ನಾನು ಹೇಳುವುದು ಇವತ್ತು

ಎರಡು ರೋಲ್ ಏನಿವೆ regulator, and one he is getting regulated ಇದು ರಿಯಲಾಗಿ ಜನರ ಮನಸ್ಸಿನಲ್ಲಿ ಬಹಳ ಗೊಂದಲ ನಿರ್ಮಾಣ ಮಾಡುತ್ತಿದೆ. especially ಇವತ್ತಿನ ಪರಿಸ್ಥಿತಿಯಲ್ಲಿ ಅಧ್ಯಕ್ಷರೇ ಈಗ ನನ್ನ ಮುಂದೊಂದು paper cutting ಇದೆ, ನಾನು ಹೆಸರೇ ಹೇಳುವುದಿಲ್ಲ, ಕನ್ನಡಪ್ರಭ, ಏಪ್ರಿಲ್ 19ನೇ ತಾರೀಖು, ಬಂದಿರುವುದು ಅಂದರೆ ಮೂರು ತಿಂಗಳ ಹಿಂದೆ. 'ಸಚಿವ ಪರಮೇಶ್ವರ ನಾಟಕ ನಮಗೆ ಗೊತ್ತಿಲ್ಲವಾ?' ಯಾರು ಹೇಳಿದ್ದಾರೆ? ನಾನು ಹೇಳಹೋಗುವುದಿಲ್ಲ, ಹೇಳಿದರೆ ಬೇರೆಯವರ House ಹೆಸರನ್ನೂ ಇಲ್ಲಿ ತರಬೇಡಿ ಅಂತೀರಿ. 'ಸಚಿವ ಪರಮೇಶ್ವರ ಬೇಕಿದ್ದರೆ ತಮ್ಮ ವೃತ್ತಿಶಿಕ್ಷಣ ಕಾಲೇಜಿನ ಎಲ್ಲಾ ಸೀಟುಗಳನ್ನೂ ಸರ್ಕಾರ ನಿಗದಿಪಡಿಸಿದ ಶುಲ್ಕಕ್ಕೆ ಹಂಚಲಿ, ಇವರ ನಾಟಕ ನಮಗೆ ಗೊತ್ತಿಲ್ಲವಾ? ... ಇವರ ವ್ಯಂಗ್ಯ. ಸರ್ಕಾರ ಯಾವುದೋ ಓಮದು ತೀರ್ಮಾನ ಕೈಗೊಳ್ಳುತ್ತದೆ, ಒಬ್ಬರು
senior political leader ಯಾರು ಬಹಳ ಜವಾಬ್ದಾರಿಯಿಂದ ಇದ್ದಾರೆ, ಯಾರು ಈ ಕಾಮೆಡ್ ಅದಕ್ಕೆ ಮುಂದಾಳುಗಳು, ಒಂದು ಮೆಡಿಕಲ್ ಕಾಲೇಜ್ ನಡೆಸುತ್ತಿದ್ದಾರೆ, ಅವರು ಹೇಳುತ್ತಾರೆ" ಇವರ ನಾಟಕ ನಮಗೆ ಗೊತ್ತಿಲ್ಲವಾ ? " ಸರ್ಕಾರ ಯಾವುದೋ ಒಂದು ತೀರ್ಮಾನ ಕೈಗೊಳ್ಳುತ್ತದೆ. ಅದನ್ನು ನಮ್ಮ ಸಂಘ ಕಾಮೆಡ್-ಕೆ ನ್ಯಾಯಾಲಯಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ ಸಂಘಕ್ಕೆ ಪರಿಹಾರ ಸಿಕ್ಕೇಸಿಗುತ್ತದೆ. ಸಂಘದಲ್ಲಿ ತಮ್ಮ ಕಾಲೇಜೂ ಬಂದುಬಿಡುತ್ತದೆ, ಹೀಗಾಗಿ ತಮ್ಮ ಕಾಲೇಜಿಗೂ ಅನುಕೂಲ ಆದರೆ ಆಗಲಿ ಎಂಬುದು ಅವರ ಲೆಕ್ಕಾಚಾರ. ಅದಕ್ಕೇ ಅವರು ಹೀಗೆಲ್ಲಾ ಹೇಳುತ್ತಾರೆ, ಇದನ್ನು ನೀವು ಹೇಳಿದಂತೆ ಬಿಜೆಪಿಯವರು ಹೇಳಲಿಲ್ಲ, APJD ಯವರು ಹೇಳಲಿಲ್ಲ, JD[S]JD[U] ನವರೂ ಹೇಳಲಿಲ್ಲ, ಇನ್ಯಾರು ಹೇಳಿದರು ಅಂತ ಊಹೆಗೆ ಬಿಡುತ್ತೇನೆ ನಾನು.Conflict of interest ಬರುತ್ತದೆ ಅಂತ ಹೇಳಿದೆನಲ್ಲಾ ಅದು. He incidentally is the petitioner, High Court ಗೆ ಹೋಗಿದ್ದರಲ್ಲಿ, ಸನ್ಮಾನ್ಯ ಆರ್.ಎಲ್. ಜಾಲಪ್ಪನವರ ಉದ್ಗಾರ ಇದು. ನಮ್ಮ ಸಚಿವರಾದ ಪರಮೇಶ್ವರರ ಮೇಲೆ. ಇದು ಇವತ್ತಿರುವ ಪರಿಸ್ಥಿತಿ. ಈ ಪರಿಸ್ಥಿತಿ ಹಿನ್ನೆಲೆಯಲ್ಲಿ ನಾವು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿಸಬೇಕು, ನಾವು ಹೈಕೋರ್ಟಿನಲ್ಲಿ ವಾದ ಮಾಡಿದ್ದೇವೆ, ಹೈಕೋರ್ಟಿಗಿಂತ ಮುಂಚೆ ಕಮಿಟಿಗಳನ್ನು ರಚಿಸಿದ್ದೇವೆ, ಆ ಕಮಿಟಿಗಳಲ್ಲೇನಾಯಿತೋ ಗೊತ್ತಿಲ್ಲ, ಏಕೆಂದರೆ transparent ಎಂದು ಹೇಳಿಕೊಳ್ಳುವ ಈ ಸರ್ಕಾರ ಆ ಕಮಿಟಿಗಳಲ್ಲಿ ಯಾವರೀತಿ transparent ಆಗಿದ್ದರು ನಮಗೆಲ್ಲಾ ಗೊತ್ತಿದೆ. ಈ ಪರಿಸ್ಥಿತಿಯಲ್ಲಿ ನಿಮ್ಮ ಸರ್ಕಾರದ seriousness ಏನು? ಅವರ sincerity ಏನು? ಇಂಗ್ಲೀಷಿನಲ್ಲಿ ಬಹಳ ಪ್ರಸಿದ್ಧವಾದ ಹೇಳಿಕೆ ಇದೆ. when you cannot commit committee it ಅಂತ, ನೀವೇನಾದರೂ ಮಾಡಲು ಆಗದೇ ಇದ್ದರೆ form a committee, ಅದೊಂದು ಕೆಲಸವನ್ನು ನೀವು ಸೊಗಸಾಗಿ ಮಾಡಿಕೊಂಡು ಬಂದಿದ್ದೀರಿ, ಮಾರ್ಚ್ 10ನೇ ತಾರೀಖು ಈ ಸದನದಲ್ಲಿ ನಾವು ಚರ್ಚೆ ಮಾಡಿದೆವು. ಮಾರ್ಚ್ 10ರ ನಂತರವೇ ಈ ಚಕ್ರ ಉರುಳಲು ಪ್ರಾರಂಭವಾಗಿದ್ದು. ಅಲ್ಲಿಯವರೆಗೂ ಮಾತುಕತೆ ಅಷ್ಟೇ. Friendly dialogue, March 10 ಆದ ಮೇಲೆ ಕ್ಯಾಬಿನೆಟಿದೆ, ಕ್ಯಾಬಿನೆಟಿನಿಂದ ವಾಪಸ್ ಬರುತ್ತೇವೆ ಅಂದವರು ಕೊನೆಗೂ ಬರಲೇ ಇಲ್ಲ. ಒಂದು Sub-Committee ಮಾಡಿದರು, ಆ sub-committee chairman ಅಂತ ಒಬ್ಬರನ್ನು ಮಾಡಿದರು, ಅವರ್ಯಾಕೋ ಬಹಳ ಒಂದು, ತಮ್ಮ political career ಬಗ್ಗೆ

ನಾನು ಚೇರ್ಮನಾಗುವುದಿಲ್ಲ ಅಂದರು. ಅದಾದಮೇಲೆ ಇನ್ನೊಬ್ಬರನ್ನು ಮಾಡಿದರು. ಅವರು chairmanship ತೆಗೆದುಕೊಳ್ಳಲೇ ಇಲ್ಲ, ಕೊನೆಗೆ ಚಂದ್ರೇಗೌಡರಿಗೆ ಆ chairmanship ಬಂತು. ಇದು March first week ನಲ್ಲಿ ನಡೆದಿರುವ ಒಂದು ಪ್ರಸಂಗ. ಈ ಸರ್ಕಾರಕ್ಕೆ ಯಾವುದಾದರೂ ಒಂದು ಸಂಗತಿ ಬಗ್ಗೆ ತನ್ನ commitment ತೋರಿಸುವುದಕ್ಕಿಂತ ಜಾಸ್ತಿ ಕಮಿಟಿ ಮಾಡುವುದರಲ್ಲೇ ಬಹಳ ಆಸಕ್ತಿ ಆಗಿಬಿಟ್ಟಿದೆ. ಅದು ಸೀಟು ಹಂಚಿಕೆ ವಿಚಾರ ಇರಬಹುದು fee structure ಇವತ್ತು fix ಮಾಡುವುದರಲ್ಲಿ ಇರಬಹುದು ಎಲ್ಲಾದರಲ್ಲೂ ಒಂದೇ, ಏನಪ್ಪ ಅಂದರೆ ಕಮಿಟಿ ಮಾಡಿಬಿಡುವುದು. ನಮಗೂ ಕೂಡ ಒಂದು ಸಮಾಧಾನ ಓ, ನಮ್ಮ ಹೇಳಿಕೆಗೆ ಒಂದು ಕಮಿಟಿ ಮಾಡಿಬಿಟ್ಟಿದ್ದಾರೆ ಅಂತ. ಆ ಕಮಿಟಿಯ ರಿಪೋರ್ಟ್‌ಗೆ ಕಾಯುತ್ತಾ ಕೂತಿರುತ್ತೇವೆ. ಆ ಕಮಿಟಿ ರಿಪೋರ್ಟ್ ಬಂದಮೇಲೆ ಆ ಕಮಿಟಿ ರಿಪೋರ್ಟ್‌ನ್ನು ಅಧ್ಯಯನ ಮಾಡುವುದಕ್ಕೆ ಇನ್ನೊಂದು ಕಮಿಟಿ. ಇದು ಈ ಸರ್ಕಾರದ ವೈಖರಿಯಾಗಿಬಿಟ್ಟಿದೆ. ಜೆಪಿ. ಶರ್ಮ ಕಮಿಟಿ ಎಂದು ಮಾಡಿದರು ಸ್ವಾಮಿ. ಅದಾದಮೇಲೆ ಡಾ. ಚಂದ್ರಶೇಖರ್‌ಶೆಟ್ಟಿ ಕಮಿಟಿ. ಆಮೇಲೆ ಕ್ಯಾಬಿನೆಟ್ ಸಬ್ ಕಮಿಟಿಗಳು. ಆದರೆ ಸೋಬಿಗ ಎಂದರೆ ಚಂದ್ರೇಗೌಡರೇ, ಮತ್ತು ಫೀ ಸ್ಟ್ರಕ್ಚರ್ ಬಗ್ಗೆ ತಾವು ವಕೀಲರು, ಯಾವುದಾದರೂ ವ್ಯಕ್ತಿ ಬಗ್ಗೆ ಆ ಕೋರ್ಟಿನಲ್ಲಿ ತೀರ್ಮಾನವನ್ನು ಮಾಡುವಾಗ ಅವನ ಪರವಾಗಿ ಒಬ್ಬ ವಕೀಲರನ್ನು ಇಡುತ್ತಾರೆ. ಆ ವಕೀಲರ ಅಬ್ಸಿನ್ಸ್‌ನಲ್ಲಿ ಆ ವ್ಯಕ್ತಿಯ ಹಣೆಬರಹವನ್ನು ಡಿಸೈಡ್ ಮಾಡುವುದಕ್ಕೆ ಹೋಗುವುದಿಲ್ಲ. ಇದು ಯಾವುದೇ ಕಮಿಟಿಯಲ್ಲಿ ಲಾಸ್ಟ್ ಒಂದು ಕಮಿಟಿ ಆಯಿತಲ್ಲಾ, ಫೀ ಫಿಕ್ಸೇಷನ್ ಕಮಿಟಿ, ಅದರಲ್ಲಿ ಬರೀ ಸರ್ಕಾರದವರು ಇದ್ದರು, ಬ್ಯುರೋಕ್ರಾಟ್ಸ್ ಇದ್ದರು, ಮ್ಯಾನೇಜ್‌ಮೆಂಟ್ ಕಡೆಯವರಿದ್ದರು, ಆದರೆ ಕೊನೆಗೂ ಕೂಡ ಆ ಶೈಕ್ಷಣಿಕ ವಾತಾವರಣವನ್ನು ಗಮನಿಸಿರುವ ಅಥವಾ ಯಾರು ನೊಂದಿದ್ದಾರೆ, ಯಾರು ಕಷ್ಟಕ್ಕೆ ಈಡಾಗುತ್ತಾರೆ, ಅವರು ಆ ಪೋಷಕರ ಕಡೆಯವರು ಒಬ್ಬರನ್ನೂ ಇವರು ಸೇರಿಸಿಕೊಳ್ಳಲಿಲ್ಲ. ಯಾರು ವಿದ್ಯಾರ್ಥಿಗಳಿದ್ದಾರೆ, ಯಾರು ತಮ್ಮ ಭವಿಷ್ಯ ಏನು ಎಂದು ಗಿಲೆಟಿನ್‌ನಲ್ಲಿ ಇಡುತ್ತಾರಾ ನಮ್ಮ ತಲೆ ಅಥವಾ ಬೇರೆ ಎಲ್ಲಿ ಇಡುತ್ತಾರೆ ಎಂದು ಒದ್ದಾಡುತ್ತಿದ್ದರಲ್ಲಾ, ಅವರ ತಲೆ ಒಬ್ಬರನ್ನೂ ಸೇರಿಸಿಕೊಳ್ಳಲಿಲ್ಲ. ಬೇಡ, ಪಬ್ಲಿಕ್ ರೆಪ್ರೆಸೆಂಟೇಟೀವ್ಸ್ ನಾವೇನು ಇದ್ದೇವೆ, ನಮ್ಮನ್ನೂ ಕೂಡ ಒಂದರಲ್ಲಾ ಸೇರಿಸಿಕೊಳ್ಳಲಿಲ್ಲ. ಇದನ್ನು ಟ್ರಾನ್ಸ್‌ಫರೆನ್ಸಿ ಎಂದು ಕರೆಯುತ್ತಾರಾ ಸ್ವಾಮಿ? ಇಡೀ ಪ್ರಪಂಚ, ಇಡೀ ದೇಶ, ಇಡೀ ನಾಡು ಅವತ್ತು ಕೂಗಾಡುತ್ತಿತ್ತು. ಆಗುವುದಿಲ್ಲ, ಜಾಸ್ತಿ ಫೀಜ್ ಆಗಿಬಿಟ್ಟರೆ ಓದುವುಕ್ಕಾಗುವುದಿಲ್ಲವೆಂದು ಇಲ್ಲರೂ ಆತಂಕದಲ್ಲಿದ್ದರು. ನೀವು ಫೀಜನ್ನು ಫಿಕ್ಸ್ ಮಾಡುವುದಕ್ಕೆ ಒಂದು ಕಮಿಟಿಯನ್ನು ಸೇರುತ್ತೀರಿ. ಇದೇನು ಗುಪ್ತಾಗೂನಾ? ಒಂದು ರೂಮ್‌ನಲ್ಲಿ ಸೇರಿಕೊಂಡು ಎಲ್ಲರೂ ಫಿಕ್ಸ್ ಮಾಡಿಬಿಟ್ಟು ಫೀಜ್‌ನ್ನು ಅನೌನ್ಸ್ ಮಾಡುವುದಕ್ಕೆ. ಅವರಿಗೆ ಕೂಡ ಗೊತ್ತು. ಆ ಪೋಷಕರಿಗೂ ಗೊತ್ತು. ಆ ಸ್ಟೂಡೆಂಟ್ಸ್‌ಗೆ ಗೊತ್ತು ಅಥವಾ ನಮ್ಮ ಯಾರು ರಾಜಕೀಯದಲ್ಲಿ ಅವರನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ನಾವು ಹೇಳುತ್ತೇವೆ, ನಮಗಾದರೂ ಕೂಡ ಗೊತ್ತು. ನಮ್ಮನ್ನು ನೀವು ಪ್ರವೇಶ ಮಾಡಲಿಲ್ಲ. ಯಾರು ಇದೊಂದು ತರಹ ಏನಾಯಿತು ಎಂದರೆ ಇದು ಹೆಜ್ಜೆ ಹೆಜ್ಜೆಗೂ ಏನಾಯಿತು ಎಂದರೆ ನಾನು ಮುಂದಕ್ಕೆ ಬರುತ್ತೇನೆ. ಒಟ್ಟಿನಲ್ಲಿ ನಿಮ್ಮ ನಿಮ್ಮದೇ ಒಂದು ಗುಂಪುಗಾರಿಕೆಯನ್ನು ಮಾಡಿಕೊಂಡು ಒಂದು ಫೀ ಸ್ಟ್ರಕ್ಚರನ್ನು ತಂದು ಇವತ್ತು

ಅನೌನ್ಸ್ ಮಾಡಿದಿರಿ. ಸನ್ಮಾನ್ಯ ಪರಮೇಶ್ವರ್‌ರವರು ಕೇಳಿದರು, ಏನು ನಾವಾ ಫಿಕ್ಸ್ ಮಾಡಿದ್ದು? ಹೈಕೋರ್ಟಿನವರು ಮಾಡಿದ್ದು ತಾವು ಒಂದು ತಮ್ಮ righteous indignation ನ್ನು ತೋರಿಸಿದಿರಿ. ನಾವಲ್ಲಪ್ಪ ಮಾಡಿದ್ದು, ಹೈಕೋರ್ಟಿನವರು ಅದನ್ನು ಮಾಡಿದ್ದು ಎಂದು. ಈ ಸರ್ಕಾರ ಇದೂ ಒಂದು ಕಂತಿದೆ. ಹೈಕೋರ್ಟಿನ ಮೇಲೆ ಹಾಕಿಬಿಡುವುದು. ಹೈಕೋರ್ಟಿನವರು ಮಾಡಿದರಪ್ಪ, ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದು. ಗ್ರಾಮೀಣ ಕೃಪಾಂಕದ ಬಗ್ಗೆ ಸುಪ್ರೀಂ ಕೋರ್ಟಿನವರು ಹೇಳಿದರಪ್ಪ, ನಾವೇನೂ ಮಾಡುವುದಕ್ಕಾಗುವುದಿಲ್ಲ, ಇದು ನಡೆದುಬಂದು ಬಿಟ್ಟಿದೆ. ಅದನ್ನು ನಾವು ಸರಿಯೋ ತಪ್ಪೋ ಎಂದು ವಿವೇಚನೆ ಮಾಡುವುದಕ್ಕೆ ಇದು ಸಮಯವಲ್ಲ. ಆದರೆ ಹೆಜ್ಜೆ ಹೆಜ್ಜೆಗೂ ಕೂಡ ಈ ಸರ್ಕಾರ ಅಕ್ಟೋಬರ್ 31 ನೇ ತಾರೀಖಿನಿಂದ ಎಕ್ಸ್ ರೇ ಮಾಡಿದರೆ, ಪ್ರತಿ ಹೆಜ್ಜೆಯಲ್ಲೂ ಮ್ಯಾನೇಜ್‌ಮೆಂಟ್‌ಗಳನ್ನು ಓಲೈಸುವ, ಮ್ಯಾನೇಜ್‌ಮೆಂಟ್‌ಗೆ ಸಾಂತ್ವನ ನೀಡುವ, ಒಂದು ಪರಿಪಾಠ ಇತ್ತೇ ಹೊರತು ವಿದ್ಯಾರ್ಥಿಗಳ ಬಗ್ಗೆ ಆ ಸಾಂತ್ವನವನ್ನು ನುಡಿಯುವುದು, ಆ ಒಂದು ಧೈರ್ಯ ತುಂಬುವ ಕೆಲಸವನ್ನು ಈ ಸರ್ಕಾರ ಮಾಡಲಿಲ್ಲವೆಂದು ಎಲ್ಲರಿಗೂ ಕೂಡ ಗೊತ್ತು. ಇವತ್ತು ಜಾಲಪ್ಪನವರ ಹೇಳಿಕೆ ನೋಡಿದರೂ ಅಷ್ಟೇನೇ, ಹೈಕೋರ್ಟಿನಲ್ಲಿ ಏನಾಯಿತು ಎಂದು ನೋಡಿದರೂ ಅಷ್ಟೇನೇ. ಆ ಕಮಿಟಿಗಳಲ್ಲಿ ಬೇರೆ ಯಾರನ್ನೂ ಸೇರಿಸಿಕೊಳ್ಳದೇ ಮಾಡಿರುವುದನ್ನು ನೋಡಿದರೆ, ಬಹಳ ಸ್ಪಷ್ಟವಾಗುವುದೇನೆಂದರೆ ಈ ಸರ್ಕಾರ ಓಟ್ ಅಂಡ್ ಓಟ್ ಮ್ಯಾನೇಜ್‌ಮೆಂಟ್‌ಗಳ ಪರ ಇರುವ ಸರ್ಕಾರ. ಒಂದೇ ಒಂದು ಇಂಚು ಅವರು ವಿದ್ಯಾರ್ಥಿಗಳ ಬಗ್ಗೆ ನಾವು ಇದ್ದೇವೆ ಎಂದು ತೋರಿಸುವ ಒಂದು ಕೆಲಸವನ್ನು ಮಾಡಲಿಲ್ಲ. ಬದಲಿಗೆ ಪೊಲಿಟಿಕಲ್ ಸ್ಟೇಟ್‌ಮೆಂಟ್ಸ್‌ಗಳು ಬಹಳ ಬಂತು. ಮಾನ್ಯ ಚಂದ್ರೇಗೌಡರದ್ದು ಬಂತು. ಕಾಗೋಡು ತಿಮ್ಮಪ್ಪನವರದ್ದು ಬಂತು. ಪರಮೇಶ್ವರ್‌ರವರದ್ದು ಬಂತು. 'ಎಚ್ಚರಿಕೆ, ಯಾರಿಗೆ ಮ್ಯಾನೇಜ್‌ಮೆಂಟ್‌ನವರಿಗೆ. ಎಚ್ಚರಿಕೆ, ನೀವೇನಾದರೂ ಫಾಲೊ ಮಾಡದಿದ್ದರೆ ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು' ಒಂದು ಊರಿನಲ್ಲಿ ಒಬ್ಬ ಭಿಕ್ಷುಕ ಒಂದು ಮನೆಗೆ ಹೋದನಂತೆ. ಭಿಕ್ಷೆ ಬೇಡಲಿಕ್ಕೆ. ಆ ಅಮ್ಮ ಎಷ್ಟು ಹೊತ್ತಾದರೂ ಕೂಡ ಭಿಕ್ಷೆ ಕೊಡಲಿಲ್ಲ. ನೋಡಮ್ಮ, ನೀನೇನಾದರೂ ಭಿಕ್ಷೆಯನ್ನು ಕೊಡದಿದ್ದರೆ ಆ ಊರಿನಲ್ಲಿ ಮಾಡಿದ ಹಾಗೆ ಮಾಡಿಬಿಡುತ್ತೇನೆ ಎಂದು ಅವನು ಅಂದ. ಆ ಅಮ್ಮನಿಗೆ ಗಾಭರಿಯಾಗಿಹೋಯಿತು. ಭಿಕ್ಷೆ ತಂದು ಹಾಕಿಬಿಟ್ಟಳು ಅವಳು. ಆಮೇಲೆ ಹೋಗುವಾಗ ಅಲ್ಲಾಪ್ಪಾ ಭಿಕ್ಷೆ ತೆಗೆದುಕೊಂಡುಬಿಟ್ಟೆ, ಆ ಊರಿನಲ್ಲಿ ಏನು ಮಾಡಿದೆ ಎಂದು ಕೇಳಿದಳು. ಮುಂದಕ್ಕೆ ಹೋಗಿದ್ದೆ ಎಂದ. ಅದೇ ಕೆಲಸವನ್ನು ಮ್ಯಾನೇಜ್‌ಮೆಂಟ್‌ನವರು ಹೆದರಿಸುತ್ತಿದ್ದರು. ನೀವೂ ಕೂಡ ಅವರು ಹೆದರಿಸುತ್ತಾರೆ, ಆ ಹೆದರಿಕೆಯಲ್ಲೇನೂ ಕೂಡ ಧಮ್ ಇಲ್ಲ, ಸತ್ವ ಇಲ್ಲ ಎಂದು ಗೊತ್ತಿದ್ದರೂ ಕೂಡ ನೀವು ಅದನ್ನು ಮಾಡುತ್ತಾ ಮಾಡುತ್ತಾ ಹೋಗಿದ್ದೀರಿ. ಅದಕ್ಕೋಸ್ಕರ ಇವತ್ತು ಒಂದು ಕಾಂಗ್ರೆಸ್ ಪಾರ್ಟಿಯ ಒಂದು ನಿಮ್ಮ ನಿಲುವು ಇತ್ತು. ನಾವು ಬಡವರಿಗೆ, ಮಧ್ಯಮ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ನಾವು ಸಹಾಯ ಮಾಡುತ್ತೇವೆಂದು. ಅದನ್ನು ಒಪ್ಪಿಕೊಂಡು ಇರುವ ಜನ ಇವತ್ತು ಅದನ್ನು ಕಾರ್ಯರೂಪಕ್ಕೆ ಇಳಿಸುವುದಕ್ಕೆ ಇಷ್ಟವಿಲ್ಲ. ಸನ್ಮಾನ್ಯ ಚಂದ್ರೇಗೌಡರೇ, ನನ್ನದೊಂದು ಪ್ರಶ್ನೆ. ಇವತ್ತು ನಿಮ್ಮ ಅಧ್ಯಕ್ಷರು ಮಂಗಳೂರಿಗೆ ಹೋಗಿದ್ದರಂತೆ. ಮಂಗಳೂರಿಗೆ ಹೋಗಿ ಅವರೊಂದು ಶಾಲೆಗೆ ಹೋದರಂತೆ. ಅವರು ಶಾಲೆಗೆ ಹೋದರೆ ಅಲ್ಲಿ ಶೌಚಾಲಯ ಚೆನ್ನಾಗಿರಲಿಲ್ಲವಂತೆ. ಅದಕ್ಕೋಸ್ಕರ ತಾವೇ ಪೊರಕೆ ತೆಗೆದುಕೊಂಡು ಗುಡಿಸಿ ನೀರು ಹಾಕಿ ಬಿಟ್ಟು ನೋಡಿ ಹೀಗೆ ಇಟ್ಟುಕೊಳ್ಳಬೇಕೆಂದು

ಹೇಳಿದರು. ಎಲ್ಲರೂ ಕೂಡ ಇದನ್ನು ಮೆಚ್ಚಬೇಕಾದ ಒಂದು ಕೆಲಸ. ಅದೇ ರೀತಿ ಅನ್ನ ದಾಸೋಹಕ್ಕೆ ಹೋಗಿದ್ದರು. ನಾನು ನಿಮ್ಮ ಜೊತೆ ಊಟ ಮಾಡುತ್ತೇನೆಂದು ಊಟ ಮಾಡಿ ಈ ಅನ್ನ ಯಾರು ಹೇಳಿ ಹಾಕುತ್ತಿರುವುದು ಎಂದು ಕೇಳಿ ಕೊನೆಗೆ ಎಸ್.ಎಂ. ಕೃಷ್ಣ ಸರ್ಕಾರ ಎಂದು ಹೇಳಿದಮೇಲೆ ಧೈರ್ಯವಾಗಿ ಊಟವನ್ನು ಮಾಡಿದರು. ಈ ಕೆಲಸವನ್ನೆಲ್ಲಾ ಮಾಡುವವರು ತಮ್ಮ ಪಾರ್ಟಿಯ ಈ ವ್ಯಕ್ತಿಗಳನ್ನು ಕರೆದುಬಿಟ್ಟು ಬೇಡ್ರಯ್ಯಾ, ಇದರಿಂದ ಒಳ್ಳೆಯದಾಗುವುದಿಲ್ಲ, ನಾವು ಇರುವುದು ಈ ಸಮುದಾಯದ ಪರವಾಗಿ, ಅಂಥ ಒಂದು ಮಾತನ್ನು ಹೇಳಿ ಮಾಡಿಸುವುದಕ್ಕೆ ಏಕೆ ಸಾಧ್ಯವಾಗಲಿಲ್ಲ? ಆದರೆ ವಿದ್ಯಾರ್ಥಿಗಳು, ಮೇಸ್ಟರುಗಳು ಬಹಳ ಚೀಪ್. ಬಹಳ ಸುಲಭ. ಈ ಮ್ಯಾನೇಜ್‌ಮೆಂಟ್‌ನವರು ಬಹಳ ಕಷ್ಟ. ಅಷ್ಟೇ ತಾನೇ? We should come to that. ಆ ರೀತಿ ಒಂದು ನಿಲುವಿಗೆ ಬರಬೇಕು.

**ಉಪಾಧ್ಯಕ್ಷರು** : ದಯವಿಟ್ಟು ಶಾಸಕರಲ್ಲಿ ಒಂದು ಸೂಚನೆ. ನ್ಯೂಸ್ ಪೇಪರ್‌ಗಳನ್ನು ಮನೆಯಲ್ಲಿ ಓದುವ ರೀತಿಯಲ್ಲಿ ಇಲ್ಲಿ ಓದುವುದನ್ನು ನೋಡಿದರೆ ಬಹಳ ಬೇಸರ ಎನ್ನಿಸುತ್ತದೆ. ದಯವಿಟ್ಟು ಓದಬೇಕೆಂದರೆ ಹೊರಗಡೆ ಹೋಗಿ ಓದಿಬನ್ನಿ. ಇಲ್ಲಿ ಬಹಿರಂಗವಾಗಿ ಪೇಪರ್‌ಗಳನ್ನು ಓದುವುದು ಈ ಸದನದಲ್ಲಿ ಕಾನೂನು ಬಾಹಿರ. ಆದ್ದರಿಂದ ಈ ರೀತಿ ಮುಂದೆ ಮಾಡಬಾರದು.

**ಶ್ರೀ ಎಸ್. ಸುರೇಶ್‌ಕುಮಾರ್** : ಮಾನ್ಯ ಉಪಾಧ್ಯಕ್ಷರೇ, ಇದು ಒಂದು ಮುಖವಾದರೆ ನಾನು ನಿಮ್ಮ ನಾಯಕರನ್ನು ಹೊಗಳುತ್ತೇನೆ. I sincerely appreciate this state's former Chief Minister Sri Veerappa Moily. ಮೊದಲನೇ ದಿವಸದಿಂದ ಈ ವಿದ್ಯಾರ್ಥಿಗಳ ಪರ ನಿಂತುಕೊಂಡು ವಿದ್ಯಾರ್ಥಿಗಳ ಈ ಸಿಇಟಿ ಬಗ್ಗೆ ತಮ್ಮ ನಿಲುವನ್ನು, ತನ್ನ ಚಿಂತನೆಯನ್ನು, ತನ್ನ ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳುತ್ತಾ ಬಂದಿರುವವರು ವೀರಪ್ಪಮೊಯಿಲಿಯವರು. ಈ ಸದನದ ಮೂಲಕ ನಾನು ವೀರಪ್ಪಮೊಯಿಲಿಯವರಿಗೆ ನಿಜವಾಗಲೂ ಕೂಡ ಆ ವಿದ್ಯಾರ್ಥಿಗಳ ಪರವಾಗಿ ಧನ್ಯವಾದಗಳನ್ನು, ಕೃತಜ್ಞತೆಗಳನ್ನು ನಾನು ಸಲ್ಲಿಸುತ್ತೇನೆ. ಅವರು ಹೇಳುತ್ತಾರೆ ಸ್ವಾಮಿ. "ವ್ಯತ್ತಿ ಶಿಕ್ಷಣ ಸುಪ್ರೀಂ ಕೋರ್ಟು ತೀರ್ಪು ಒಂದು ಕಳ್ಳನೆಪ". ವೀರಪ್ಪಮೊಯಿಲಿಯವರು ಹೇಳಿದ್ದು. ನಾವಲ್ಲ. ಅಪೋಜಿಷನ್ ಪಾರ್ಟಿ ಇರುವುದೇ ಟೀಕೆ ಮಾಡುವುದಕ್ಕೆ. ಅಲ್ಲ, ವೀರಪ್ಪಮೊಯಿಲಿಯವರು ಯಾರ ಕಾಲದಲ್ಲಿ ಸಿಇಟಿ ಪ್ರಾರಂಭವಾಗಿತ್ತು, ಆಗ ಅವರು ಇವತ್ತು ಈ ಮಾತನ್ನು, ಈ ಒಂದು ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ. ಸ್ವತಃ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಈ ಅಂಶವನ್ನು ಅವರು ಉಲ್ಲೇಖ ಮಾಡಿದ್ದಾರೆ. ಅಷ್ಟೇ ಅಲ್ಲ, 'If my information is right, ಒಂದು 15 ದಿವಸಗಳ ಹಿಂದೆ ವೀರಪ್ಪಮೊಯಿಲಿಯವರು ನಮ್ಮ ರಾಷ್ಟ್ರಪತಿಗಳನ್ನು ಭೇಟಿಮಾಡಿ ಈ ಸಿಇಟಿ ಸಮಸ್ಯೆ ಬಹಳ ಜ್ವಲಂತ ಸಮಸ್ಯೆ. ಈ ಸಮಸ್ಯೆಯನ್ನು ಇತ್ಯರ್ಥ ಮಾಡುವುದಕ್ಕೋಸ್ಕರ ಸುಪ್ರೀಂ ಕೋರ್ಟಿನ ಪೂರ್ಣಪೀಠಕ್ಕೆ ಇದನ್ನು ವಹಿಸಬೇಕೆಂದು ಅವರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. What a contrast! ಎಲ್ಲಿ ಅವರು ವಿದ್ಯಾರ್ಥಿಗಳ ಪರವಾಗಿ ನಿಂತಿರುವ ಒಬ್ಬರು ಮಾಜಿ ಮುಖ್ಯಮಂತ್ರಿ ಎಲ್ಲಿ? ಇಲ್ಲಾ ನಾನು ಇರುವುದೇ ಮ್ಯಾನೇಜ್‌ಮೆಂಟ್ ಪರವಾಗಿ ಅಂತ ಹೆಜ್ಜೆ ಹೆಜ್ಜೆಗೂ ತೋರಿಸುತ್ತಿರುವ ಇಂದಿನ ಸರ್ಕಾರ ಎಲ್ಲಿ?

**ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಉಪಾಧ್ಯಕ್ಷರೇ, ಈ ರೀತಿ ಪದೇ ಪದೇ ಸರ್ಕಾರ ಮ್ಯಾನೇಜ್‌ಮೆಂಟ್ ಪರವಾಗಿ, ಸಕಾರಣಗಳಿಲ್ಲದೆ ಮ್ಯಾನೇಜ್‌ಮೆಂಟ್ ಪರವಾಗಿ ಎಂದು ಹೇಳುವುದು ವಾದಕ್ಕೆ ಬಹಳ ಸುಲಭ. ಬರೀ ವಾದ ಮಾಡುವುದಷ್ಟೇ ನಿಮ್ಮ ಜವಾಬ್ದಾರಿ. ಇವರು ವಾದ ಮಾಡುವುದು ನೋಡಿದರೆ ಏನಾಗಿದೆ ಎಂದರೆ ಬಿಜೆಪಿ ನವರ ಇನ್ಸ್‌ಟಿಟ್ಯೂಷನ್ಸ್ ಇಲ್ಲ, ಆದ್ದರಿಂದ ನಾವು ಕಾಂಗ್ರೆಸ್‌ನಲ್ಲಿರುವ ಇನ್ಸ್‌ಟಿಟ್ಯೂಷನ್‌ಗಳನ್ನು ವಿರೋಧ ಮಾಡಬೇಕು. ಇಷ್ಟಕ್ಕೆ ಸೀಮಿತವಾದ ಹಾಗೆ ಕಾಣುತ್ತದೆ. ಸಾಕಷ್ಟು ಹಿರಿಯ ಅನುಭವಿ ಸದಸ್ಯರಿದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ಈ ಕೇಸ್‌ನ ಬಗ್ಗೆ ಈಗಾಗಲೇ ವಾದವಿವಾದಗಳು ಮುಗಿದು ಇನ್ನೂ ತೀರ್ಪು ಬರತಕ್ಕ ಸಂದರ್ಭ ಇದೆ. ಈ ಸಮಯದಲ್ಲಿ ನೀವು ಚರ್ಚೆ ಮಾಡುತ್ತೀರಿ, ಇಂಥ ವಿಚಾರಗಳು ಚರ್ಚೆ ಆಗಬೇಕು ಎನ್ನುವಂಥ ಇಚ್ಛೆ ಇರತಕ್ಕವನು ನಾನು. ಆದ್ದರಿಂದ ನಾನು ಮಧ್ಯೆ ಪ್ರವೇಶ ಮಾಡುವುದಿಲ್ಲ. ಆದರೆ ಪ್ರತಿ ಸಂದರ್ಭದಲ್ಲಿಯೂ ನಾನು ಒಂದು ಪ್ರಶ್ನೆಯನ್ನು ಅವರಲ್ಲಿ ಕೇಳಬೇಕು. ಯಾವ ಯಾವ ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳಿಗೆ ಎಷ್ಟು ಸೀಟ್ಸ್‌ಗಳಿದ್ದಾವೆ, ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಷ್ಟು ಸೀಟ್ಸ್‌ಗಳಿದ್ದಾವೆ? ದಂತ ಕಾಲೇಜಿಗೆ ಎಷ್ಟು ಸೀಟ್ಸ್‌ಗಳಿದ್ದಾವೆ? ಕರ್ನಾಟಕದಲ್ಲಿ ಎಷ್ಟು ಸೀಟುಗಳಿದ್ದಾವೆ? ಬೇರೆ ರಾಜ್ಯಗಳಲ್ಲಿ ಎಷ್ಟು ಸೀಟುಗಳಿದ್ದಾವೆ? ಇದರಲ್ಲಿ ಎಷ್ಟನ್ನು ಮ್ಯಾನೇಜ್‌ಮೆಂಟ್ ಮಾಡುತ್ತಿದ್ದಾರೆ, ಬರೀ ಅವರು ನಡೆಸುತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ನೂರಕ್ಕೆ ನೂರು ಸೀಟುಗಳನ್ನು ನಾವೇ ಕೊಡಿ ಎಂದು ಕೇಳುವುದಕ್ಕಾಗುತ್ತದೋ, ಅಥವಾ ಎಷ್ಟು ಕೊಡಿ ಎಂದು ಕೇಳಬಹುದು? ಒಟ್ಟಾರೆ ಬರತಕ್ಕಂಥ ಮೀಸಲಾತಿಯಿಂದ ರಾಜ್ಯ ಸರ್ಕಾರಕ್ಕೆ ಸೀಟುಗಳು ಎಷ್ಟು? ರಾಜ್ಯ ಸರ್ಕಾರದ ಅಗತ್ಯಗಳು ಏನು? ಆಮೇಲೂ ಓದುವಂಥವರಿಗೆ ಏನು ಮಾಡಬೇಕು? ಈ ಸಲಹೆಗಳನ್ನು ಅವರು ಕೊಟ್ಟರೆ ನಾವು ಪರಿಶೀಲನೆ ಮಾಡಬಹುದು. ಹಾಗಾದರೆ, ಎಲ್ಲಿ ಮ್ಯಾನೇಜ್‌ಮೆಂಟ್ ಪರ? ಯಾವುದನ್ನು ಪ್ರಾಮಾಣಿಕವಾಗಿ ನಿಷ್ಟೆಯಿಂದ, ಸತ್ಯ ಧರ್ಮಗಳಿಂದ ನಾವು ಮಾಡಬಹುದು ಎಂದು ಹೇಳಿ ಲೆಕ್ಕಾಚಾರ ಮಾಡಿಕೊಂಡು ಮಾಡಿದ್ದೇವೋ ಅದರ ಬಗ್ಗೆ ನಿಮಗೆ ಶಂಕೆಗಳು ಇದ್ದರೆ, ಶಂಕೆ ಅಭಿವ್ಯಕ್ತ ಮಾಡತಕ್ಕಂಥ ಸ್ವಾತಂತ್ರ್ಯ ಅಭಿವ್ಯಕ್ತ ಮಾಡತಕ್ಕಂಥದ್ದು ನಿಮ್ಮ ಕರ್ತವ್ಯ ಇದೆ. ಆದರೆ ಪ್ರತಿ ಹಂತದಲ್ಲಿ ಸರ್ಕಾರ ಮ್ಯಾನೇಜ್‌ಮೆಂಟ್ ಪರವಾಗಿದೆ ಎಂದು ಹೇಳುತ್ತೀರಿ. ಎಲ್ಲಿ ಯಾವ ಸಂದರ್ಭದಲ್ಲಿ? ಎಲ್ಲಾದರೂ ಒಂದು ಕಾರಣಗಳು ಬೇಕು. ಚರ್ಚೆ ಮಾಡಿಲ್ಲ. ನಾನು ವಿವರಗಳಿಗೆಲ್ಲಾ ಹೋಗುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಏನು ಹೇಳಿದ್ದಾರೆ? ಮತ್ತೊಂದು ಏನು ಹೇಳಿದ್ದಾರೆ, ಮಗದೊಂದು ಏನು ಹೇಳಿದ್ದಾರೆ? ವಿವರಕ್ಕೆ ಹೋಗೋಣ. ಆದರೆ ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು ಸುರೇಶ್ ಕುಮಾರ್ ಅವರು. ಇಡೀ ದೇಶದಲ್ಲಿ ಯಾವ ಸರ್ಕಾರದ ನಿಲುವಿನ ಪರವಾಗಿಯೂ ಯಾವ ಉಚ್ಚ ನ್ಯಾಯಾಲಯಗಳೂ ನಿಲ್ಲಲಿಲ್ಲ. ಆದರೆ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯ ಈ ಸರ್ಕಾರ ತೆಗೆದುಕೊಂಡಂತಹ ನಿಲುವಿನ ಪರವಾಗಿ ಇತ್ತು. ಶೇಕಡಾ 25:75ನ್ನು ಬೇರೆ ಯಾವ ರಾಜ್ಯದ ಹೈಕೋರ್ಟುಗಳೂ ಕೊಟ್ಟಿಲ್ಲ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು. ಫೀ ಸ್ಟ್ರಕ್ಚರ್ ಬಗ್ಗೆ ತೀರ್ಮಾನ ಮಾಡುವುದಕ್ಕೆ ನಮಗೆ ಇನ್ನೂ ಸ್ವಾತಂತ್ರ್ಯ ಬಂದಿಲ್ಲ. ಆ ಕೇಸ್ ಮುಗಿಯಲಿ ಆ ಮೇಲೆ ಮಾಡೋಣ. ಆದರೆ ಅದು ಇಂಪಾರ್ಟೆಂಟ್ ಮಾಡೋಣ. ಆದರೆ ಇಲ್ಲಿ

ಸಲಹೆ ಕೊಟ್ಟು ಕುಳಿತುಕೊಂಡು ಮಾಡಬಹುದೇ ಹೊರತು ಟೀಕೆಗಾಗಿ ಟೀಕೆ ಮಾಡತಕ್ಕಂಥಹದು ಅಲ್ಲ. ಮುಂದಿನ ಮನೆಗೆ ಹೋಗುತ್ತೇವೆಂದರೆ ಹೋಗಬಹುದು. ನಾವು ಈ ಮನೆಯಲ್ಲೇ ಇರುವವರು. ಇಲ್ಲೇ ಏನಾದರೂ ಭಿಕ್ಷೆ ಸಿಗುತ್ತದಾ ಎಂದು ನೋಡುವವರು. ಮ್ಯಾನೇಜ್‌ಮೆಂಟ್‌ನವರಾದರೂ ಹೋಗಲಿ ಯಾರಾದರೂ ಹೋಗಲಿ. ಆದರೆ ಇದೇನಾಗುತ್ತದೆ ಎಂದು ಹೇಳಿದರೆ ಪ್ರಾಮಾಣಿಕವಾಗಿ ಹಗಲೂ ರಾತ್ರಿ ರಾಜ್ಯದ ಹಿತ ನೋಡುತ್ತೇವೆ. ಇದೊಂದು ಪ್ರಾತಿನಿಧಿಕ ಸರ್ಕಾರ. ಈ ಸರ್ಕಾರ ಪ್ರಾತಿನಿಧಿಕವಾಗಿ ಇರತಕ್ಕಂಥ ಸರ್ಕಾರ. ಈ ಪ್ರಾತಿನಿಧಿಕವನ್ನು ಸಂಪೂರ್ಣವಾಗಿ ಬಲ್ಲಂತಹ ನಾವು ರಾಜ್ಯದ ಹಿತವನ್ನು ರಾಜ್ಯದ ಹಿತವನ್ನು ಕಾಯಕತಕ್ಕಂಥ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೇವೆ. ಅದನ್ನು ನಾವು ತಲೆಯಲ್ಲಿ ಇಟ್ಟುಕೊಂಡೇ ಕೆಲಸ ಮಾಡುತ್ತೇವೆ. ಅದರಿಂದ ಮಾನ್ಯ ಸುರೇಶ್ ಕುಮಾರ್ ಅವರಲ್ಲಿ ಕೇಳುವುದೇನೆಂದರೆ ಸಲಹೆಗಳನ್ನು ಏನಾದರೂ ಕೊಟ್ಟರೆ ಕುಳಿತುಕೊಂಡು ಸರ್ಕಾರ ಯೋಜನೆಯನ್ನಾದರೂ ಮಾಡಬಹುದು. ಬರೇ ಸರ್ಕಾರವನ್ನು ಬಯ್ಯುವುದಕ್ಕೇ ಚರ್ಚೆಮಾಡುವುದಾದರೆ ನನ್ನದೇನೂ ಅಭ್ಯಂತರ ಇಲ್ಲ.

**ಶ್ರೀ ಕೆ. ಶ್ರೀನಿವಾಸ ಗೌಡ ಕುದುವನಹಳ್ಳಿ** : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್ ಅವರು ಸರ್ಕಾರದ ಮ್ಯಾನೇಜ್‌ಮೆಂಟ್ ಪರವಾಗಿದೆ ಎಂದು ಹೇಳುವುದರಲ್ಲಿ ಅರ್ಥ ಇದೆ. ಸುಮಾರು 97–98 ಪರ್ಸೆಂಟ್ ನಿಮ್ಮ ಪಕ್ಷದವರೇ; ಒಂದೇ ಒಂದು ವಿಚಾರ ಹೇಳುತ್ತೇನೆ. ನಾನು ಹೇಳಿ ಬಿಡುತ್ತೇನೆ. ಒಂದು ಅನೌನ್ಸ್ ಮಾಡಲಿ ಸ್ವಾಮಿ. ಆರು ವರ್ಷ ಪಕ್ಷದಿಂದ ನಿಮ್ಮನ್ನು ಉಚ್ಚಾಟನೆ ಮಾಡುತ್ತೇವೆ ನೀವು ನಮ್ಮ ಸಮಕ್ಕೆ ಬರದೇ ಇದ್ದರೆ ಎಂದು ಒಂದು ಸಾರಿ ನಾಳೆ ಸ್ಟೇಟ್‌ಮೆಂಟ್ ಬರಲಿ. ನಾಡಿದ್ದರೊಳಗಾಗಿ ಅವರು ಒಪ್ಪಿಕೊಳ್ಳದೇ ಇದ್ದರೆ ನಾನು ವಿಧಾನಸಭೆಯಿಂದ ರಾಜೀನಾಮೆ ಕೊಟ್ಟು ಹೋಗುತ್ತೇನೆ ಸ್ವಾಮಿ. ಇದೆಲ್ಲಾ ನೀವು ಏಕೆ ಹೇಳುತ್ತೀರಿ? ನಾಳೆ ನಮ್ಮ ಪಕ್ಷದಿಂದ ಆರು ವರ್ಷ ಉಚ್ಚಾಟನೆ ಮಾಡುತ್ತೇವೆಂದು ಹೇಳಿ. ನಾಳೆ ಬೆಳಿಗ್ಗೆ ಕಾಂಪ್ರಮೈಸ್ ಆಗದಿದ್ದರೆ ನಮ್ಮ ಪಕ್ಷದಿಂದ ಆರು ವರ್ಷ ಉಚ್ಚಾಟನೆ ಮಾಡುತ್ತೇವೆ ಎನ್ನುವಂತಹ ಮಾತನ್ನು ಒಂದು ಸಾರಿ ನೀವು ಯಾರಾದರೂ ಹೇಳಿ. ಅವತ್ತು ಒಪ್ಪದಿದ್ದರೆ ಕೇಳಿ. ನೀವು ಸುಮ್ಮನೆ ಇದನ್ನು ಮುಂದೆ ಹಾಖಿಕೊಳ್ಳುವುದು, ನಾಟಕ ಆಡುವುದು. ಇದು ಮುಂದೆಕ್ಕೆ ಹೋಗುತ್ತದೆಯೇವಿನಹ ಇದನ್ನು ತೀರ್ಮಾನ ಮಾಡಬೇಕು ಎಂದು ನಿಮ್ಮ ಮನಸ್ಸಲ್ಲೂ ಕೂಡ ಇಲ್ಲ. ವಿರೋಧ ಕಟ್ಟಿಕೊಳ್ಳಬೇಕೆಂಬ ಕೆಚ್ಚೆದೆ ನಿಮಗೆ ಇದ್ದರೆ ನಾಳೆ ಪತ್ರಿಕೆಯಲ್ಲಿ ಹೇಳಿಕೆ ಕೊಡಿ ಉದ್ಘಾಟನೆ ಮಾಡುತ್ತೇವೆಂದು ಹೇಳಿ. ಅರ್ಧ ಗಂಟೆಯಲ್ಲಿ ಸೆಟಲ್ ಆಗುತ್ತದೆ.

**ಶ್ರೀ ಡಿ.ಬಿ. ಚಂದ್ರೇಗೌಡ** : ಮಾನ್ಯ ಶ್ರೀನಿವಾಸ ಗೌಡರೇ, ಕೇಳಿ. ನಾವೂ ಸಹ ಗ್ರಾಮೀಣ ಪ್ರದೇಶದಿಂದ ಬಂದವರೇ. ತೀರಾ ಬಡತನದಿಂದ ಬಂದವರೇ. ನಮಗೂ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜಿಗೆ ಸೀಟು ಸಿಗಲಿಲ್ಲ ಎರಡು ಯಾವುದೇ ಕೋರ್ಸ್‌ಗೆ ಸೇರಲಾರದೆ ಬಿಎಸ್‌ಸಿ ಮಾಡಿಕೊಂಡು ಎಲ್‌ಎಲ್‌ಬಿ ಮಾಡಿಕೊಂಡು ಬಂದಿದ್ದೇವೆ. ಕೊನೆಗೆ ಎಲ್ಲೂ ಸಿಗದೇ ಇದ್ದುದ್ದರಿಂದ ವಕೀಲಿ ಮಾಡಿಕೊಂಡು ಬಂದವರೇ. ಎಲ್ಲೂ ಸಿಗಲಿಲ್ಲ ಎಂದು ಹೇಳಿ ವಕೀಲಿ ಮಾಡಿಕೊಂಡು ಬಂದವರು. I am very plain in this matter. In 1953, I tried to

become a Doctor. ಆಗಲಿಲ್ಲ, ನನಗೆ. ಆದರೆ ಆ ನೋವುಗಳ ಹಿಂದೆ ಬಂದಂತಹ ನಮ್ಮಂಥವರಿಗೆ ಬೆಂಗಳೂರಿನಲ್ಲಿ ಕುಳಿತುಕೊಂಡು ಬುದ್ಧಿ ಹೇಳುತ್ತೀರಲ್ಲಾ, ಅದಕ್ಕೇ ಹೇಳುತ್ತೇವೆ. ಸರ್ಕಾರದ ಮೇಲೆ ಒಂದು ಆಪಾದನೆ ಮಾಡುವಾಗ, ವ್ಯಕ್ತಿಗಳ ಮೇಲೆ ಕೆಲವು ಆಪಾದನೆಗಳನ್ನು ಮಾಡುವಾಗ, ಸರಿಯಾದ ಮಾಹಿತಿಗಳನ್ನು ಇಟ್ಟುಕೊಂಡು ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ಮೆಡಿಕಲ್ ಕಾಲೇಜುಗಳು ಇದ್ದಾವೆ? ಎಷ್ಟು ಸೀಟುಗಳು ಇದ್ದಾವೆ? ಉನ್ನಿಕೃಷ್ಣನ್ ಜಡ್ಜ್‌ಮೆಂಟನ್ನು ಕೋರ್ಟ್ ತಿರಸ್ಕರಿಸಿದ ಮೇಲೆ ಅಲ್ಲಿ ಬಂದಿರತಕ್ಕಂಥ ಜಡ್ಜ್ ಮೆಂಟ್ ಏನು ಇದೆ? ಡಿ.ಎಂ.ಎ.ವೈ ಕೇಸಿನ ಜಡ್ಜ್‌ಮೆಂಟ್, ಆ ಜಡ್ಜ್‌ಮೆಂಟ್ ಭಾಗವನ್ನು ಹೇಗೆ ಫಿಟ್‌ಇನ್ ಮಾಡಬಹುದಿತ್ತು? ಸರ್ಕಾರ ಹೇಗೆ ಮಾಡಲಿಲ್ಲ? ದಯವಿಟ್ಟು ಅದನ್ನು ನೀವು ಹೇಳಿ We will try to correct ourselves. But, on the contrary, you are presenting a case against the party, against the Leaders and against the Government without any substantiation.

**Sri S. Suresh Kumar :** That is your misfortune.

**ಶ್ರೀ ಡಿ.ಬಿ. ಚಂದ್ರೇಗೌಡ** : ಅದು ಮಿಸ್ ಫಾರ್ಚೂನ್ ಅಲ್ಲ. ನಿಮಗೆ ನಾವು ಎಲ್ಲಿಂದ ಬಂದಿದ್ದೇವೆಂದು ಗೊತ್ತಿಲ್ಲ. ನೀವು ಬಂದಿರತಕ್ಕಂಥದ್ದು ಇದೆಯಲ್ಲಾ, ವಿದ್ಯಾರ್ಥಿಗಳ ಪರ ಮಾತನಾಡುತ್ತಿದ್ದೀರಿ. ಯಾವ ವಿದ್ಯಾರ್ಥಿಗಳ ಪರವಾಗಿ ಮಾತನಾಡುತ್ತಿದ್ದೀರಿ?

ಗೊಂದಲ

**ಶ್ರೀ ಆರಗ ಜ್ಞಾನೇಂದ್ರ** : ಯಾರು ದಲಿತರು? ಯಾರು ಬಡವರು?

ಗೊಂದಲ

**ಶ್ರೀ ಡಿ.ಬಿ. ಚಂದ್ರೇಗೌಡ** : ಮಾನ್ಯ ಉಪಸಭಾಪತಿಯವರೇ, ಸಿಇಟಿ ಅವರು ಕರೆದಂತಹ ಕಾನ್ ಫೆರೆನ್ಸ್‌ಗೆ ಹೋಗಿದ್ದೇವೆ. ನಾನೊಬ್ಬ ಸಮಿತಿಯ ಅಧ್ಯಕ್ಷನಾಗಿ ವಿದ್ಯಾರ್ಥಿಗಳು ಬಂದಾಗ ನನ್ನ ಮನೆಯೊಳಗೆ ಅವರ ಹತ್ತಿರ ಕುಳಿತು ಚರ್ಚೆ ಮಾಡಿದ್ದೇನೆ. ಇದನ್ನೆಲ್ಲಾ ಪ್ರಸಿದ್ಧಿ ಪಡಿಸಿಕೊಳ್ಳುವುದಕ್ಕೆ ನಾವು ಮಾಡಿಲ್ಲ. ಅವರ ಅಭಿಪ್ರಾಯಗಳನ್ನೂ ಪಡೆದಿದ್ದೇವೆ. ಅದು ಇವರಿಗೆ ಗೊತ್ತಿಲ್ಲದಿದ್ದರೆ ನಾವೇನು ಮಾಡೋಣ?

**ಶ್ರೀ ಜಗದೀಶ್ ಶೆಟ್ಟರ್** : ಮಾನ್ಯ ಚಂದ್ರೇಗೌಡರೇ, ತಾವು ಯಾವ ಹಿನ್ನೆಲೆಯಲ್ಲಿ ಬಂದಿದ್ದೇನೆ ಎನ್ನುವಂತಹ ಮಾತನ್ನು ಹೇಳಿದಿರಿ. ಆ ಹಿನ್ನೆಲೆಯಲ್ಲಿ ಬಂದಂತಹ ಚಂದ್ರೇಗೌಡರು ಆ ಹಿನ್ನೆಲೆ ಇದ್ದಂತಹವರು ಇದರ ಬಗ್ಗೆ ಸರಿಯಾದಂತಹ ನಿರ್ಣಯ ಆಗಲಿಲ್ಲ ಎಂದು ಹೇಳುತ್ತೇನೆ. ಅದನ್ನೇ ನಾನು ಹೇಳುತ್ತಿರುವುದು.

**ಶ್ರೀ ಡಿ.ಬಿ. ಚಂದ್ರೇಗೌಡ** : ನಾವು ಮಾಡಿರುವಂತಹ ತೀರ್ಪನ್ನು ಕೋರ್ಟು ಒಪ್ಪಿಕೊಂಡಿದೆ. ಅದನ್ನು ಮಾತ್ರ ಮರೆಯಬೇಡಿ.

ಗೊಂದಲ

**ಶ್ರೀ ಜಗದೀಶ್ ಶೆಟ್ಟರ್** : ಮ್ಯಾನೇಜ್‌ಮೆಂಟ್ ಪರವಾಗಿ ಮಾಡಿದ್ದು...

ಗೊಂದಲ

**ಶ್ರೀ ಡಿ.ಬಿ. ಚಂದ್ರೇಗೌಡ** : ನಾವೇನು ಹೇಳಿದೆವೋ, ಅದನ್ನೇ ಕೋರ್ಟು ಒಪ್ಪಿಕೊಂಡಿವೆ. ಸೀಟು ಮ್ಯಾಟರ್ಸ್‌ನಲ್ಲಿ ಒಪ್ಪಿಕೊಂಡಿದೆ. ಸೀಟ್ ಮ್ಯಾಟ್ರಿಕ್ಸ್ ವಿಚಾರದಲ್ಲಿ ಈ ಸರ್ಕಾರ ತೆಗೆದುಕೊಂಡಂತಹ ನಿಲುವನ್ನೇ ಕೋರ್ಟು ಒಪ್ಪಿಕೊಂಡಿದೆ.

**ಶ್ರೀ ಜಗದೀಶ್ ಶೆಟ್ಟರ್** : ಫಿ ಸ್ಟ್ರಕ್ಚರ್ ಬಗ್ಗೆ ಆಗಲಿಲ್ಲ. ನಾವು ಅದನ್ನೇ ಹೇಳುತ್ತಿದ್ದೇವೆ.

**ಶ್ರೀ ಡಿ.ಬಿ. ಚಂದ್ರೇಗೌಡ** : ಫೀ ಸ್ಟ್ರಕ್ಚರ್ ಮಾಡುವಂತಹ ಅಧಿಕಾರ ಸರ್ಕಾರಕ್ಕೆ ಎಲ್ಲಿದೆ ಎಂಬುದನ್ನು ಹೇಳಿ.

**ಶ್ರೀ ಜಗದೀಶ್ ಶೆಟ್ಟರ್** : ಆ ಹಿನ್ನೆಲೆಯಲ್ಲಿ ನಾವು ಹೇಳುತ್ತಿದ್ದೇವೆ. ಫೀ ಸ್ಟ್ರಕ್ಚರ್ ಆಗಿಲ್ಲ, ಅದರ ಬಗ್ಗೆನೂ ಚರ್ಚೆ ಮಾಡೋಣ.

**ಶ್ರೀ ಡಿ.ಬಿ. ಚಂದ್ರೇಗೌಡ** : ಸಂವಿಧಾನದಲ್ಲಿ ಆಗಲೀ, ಶಾಸನಗಳಲ್ಲಿ ಆಗಲಿಲ್ಲ ಇಲ್ಲವೇ ಸರ್ವೋಚ್ಚ ನ್ಯಾಯಾಲಯ ಕೊಟ್ಟಂತಹ ಟಿ.ಎಂ.ಎ.ವೈ ಕೇಸ್ ನಲ್ಲಿ ಆಗಲೀ ಸರ್ಕಾರ ಈ ವ್ಯಾಪ್ತಿಯಲ್ಲಿ ಇದನ್ನು ಮಾಡಬಹುದು ಎಂದು ಹೇಳಿ. ನೀವು ಮಾಡಿ ನಿಮ್ಮ ಜೊತೆಗೆ ಇದ್ದೇವೆ ಎಂದು ಹೇಳಿ. I will agree fully. I endurse your views.

**ಶ್ರೀ ಜಗದೀಶ್ ಶೆಟ್ಟರ್** : ನಾವು ಅವತ್ತಿನಿಂದ ಹೇಳುತ್ತಾ ಬಂದಿದ್ದೇವೆ. ಆದರೂ ಏನೂ ಆಗುತ್ತಿಲ್ಲ.

**ಶ್ರೀ ಡಿ.ಬಿ. ಚಂದ್ರೇಗೌಡ** : ಬರೇ ಹೇಳುವುದು ಆಗುತ್ತದೆ ಅಷ್ಟೇ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಚಂದ್ರೇಗೌಡರೇ, ನನಗೆ ಒಂದು ವಿಚಾರ ಅರ್ಥ ಆಗದೇ ಇರುವುದು, ಕಮಿಟಿ ಕ್ಯಾಬಿನೆಟ್ ಸಬ್ ಕಮಿಟಿ ಛೇರ್ಮನ್ ಆಗಿ ನೀವು ಮಾಡಿರತಕ್ಕಂಥ ಎಫರ್ಟ್ಸ್ ನಮಗೆಲ್ಲಾ ಅರ್ಥ ಆಗುತ್ತದೆ. ನಾವು in between the lines ಓದುವಷ್ಟು ಶಕ್ತಿ ನಮಗೆ ಇದೆ. ಆದರೆ ಮಾನ್ಯ ಸುರೇಶ್ ಕುಮಾರ್ ಅವರು ಮಾತನಾಡಿದಾಗ ಅವರು ಏನು ಆಪಾದನೆ ಮಾಡಿದರು ಎಂಬುದು ನನಗೆ ಇನ್ನೂ ಅರ್ಥ ಆಗುತ್ತಿಲ್ಲ. What is the allegation he has made.

**ಶ್ರೀ ಡಿ.ಬಿ. ಚಂದ್ರೇಗೌಡ** : ನೀವು ಎಲ್ಲಾ ಮ್ಯಾನೇಜ್‌ಮೆಂಟ್ ಪರ ಇದ್ದೀರಿ ಎಂದು ಹೇಳಿದರು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಅದರಲ್ಲಿ ತಪ್ಪೇನು? ನೀವು ಇರುವುದು ನಿಜ, ಅದನ್ನು ಅವರು ಹೇಳಿದ್ದಾರೆ. See the point here is.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಈಗ ಒಂದು ಕೆಲಸ ಮಾಡಿ. ಕರ್ನಾಟಕದಲ್ಲಿ ಮೆಡಿಕಲ್ ಕಾಲೇಜುಗಳನ್ನು ಮಠಗಳು ಎಷ್ಟು ನಡೆಸುತ್ತಾರೆ? ಪ್ರೈವೇಟ್ ಇಂಡಿವಿಜುಯಲ್ಸ್ ಎಷ್ಟು ನಡೆಸುತ್ತಾರೆ? ಮತ್ತೆ ಬೇರೆ ಬೇರೆ ಜಾತಿ ಸಣ್ಣ ಜಾತಿ ಸಂಸ್ಥೆಗಳು ಎಷ್ಟು ನಡೆಸುತ್ತವೆ? ಅದರ ಒಂದು ಪಟ್ಟಿ ಮಾಡಿ ಪಬ್ಲಿಕ್ ಮಾಡಿ. ಅದರ ಜೊತೆಗೆ ಯಾವ್ಯಾವ ಟ್ರಸ್ಟ್‌ನಲ್ಲಿ ಯಾರ್ಯಾರು ಇದ್ದಾರೆ? ಇದೂ ಸಹಿತ

ಹೊರಗಡೆ ಬರಲಿ. ಅದು ಬರೇ ಎಂಬಿಬಿಎಸ್, ಇಂಜಿನಿಯರಿಂಗ್ ಅಲ್ಲ. ಎಂಬಿಬಿಎಸ್, ಇಂಜಿನಿಯರಿಂಗ್, ಟಿಸಿಹೆಚ್, ಬಿಎಡ್, ನರ್ಸಿಂಗ್ ಇದೆಲ್ಲಾ ಏನು ಇದೆಯಲ್ಲಾ I am honestly telling you that, as far as you are concerned, we appreciate that you have made come efforts. But ಇದರಲ್ಲಿ ಅವರು ಹೇಳಿರತಕ್ಕದ್ದರಲ್ಲಿ ತಪ್ಪು ಏನು ಇದೆ? ನಾನು ಹೊರಗಡೆ ಇದ್ದು ಅವರ ಡಿಬೇಟನ್ನು ಅಬ್ಸರ್ವ್ ಮಾಡುತ್ತಿದ್ದೇನೆ. ಅವರ ಡಿಬೇಟ್‌ನಲ್ಲಿ ಇನ್ನೂ ಏನೂ ಅಲಿಗೇಷನ್ಸ್ ಮಾಡೇ ಇಲ್ಲ. ಅವರೇನು ನಿಮ್ಮ ಕಾಂಗ್ರೆಸ್ ಪಾರ್ಟಿಯವರು ಮೆಡಿಕಲ್ ಕಾಲೇಜಸ್‌ನಿಂದ, ಇಂಜಿನಿಯರಿಂಗ್ ಕಾಲೇಜ್ ಮ್ಯಾನೇಜ್‌ಮೆಂಟ್‌ನಿಂದ ಎಲೆಕ್ಷನ್ಸ್ ಫಂಡ್ ಕಲೆಕ್ಟ್ ಮಾಡಿಕೊಂಡಿದ್ದೀರಿ ಎಂದು ಹೇಳಿದ್ದರೆ I would have said that it is an allegation. He has not said so.

**ಶ್ರೀ ಡಿ.ಬಿ. ಚಂದ್ರೇಗೌಡ** : ಅವರು ಹೇಳಿದ್ದಾರೆ. He has said it.

Sri P.G.R. Sindhia : If he had made any allegation, that you know this is a source of income to your party ಎಂದಿದ್ದರೆ ನಾನು ಅಪ್ರೀಷಿಯೇಟ್ ಮಾಡುತ್ತೇವೆ, ನೀವು ಅಬ್ಜೆಕ್ಟ್ ಮಾಡಬೇಕು. ಅವರು ಏನೂ ಹೇಳಲಿಲ್ಲ.

**ಶ್ರೀ ಬಿ.ಎಚ್. ಬನ್ನಿಕೋಡ್** : ಮಾನ್ಯ ಸುರೇಶ್ ಕುಮಾರ್ ಅವರೇ, ಮಾನ್ಯ ಸಿಂಧ್ಯಾ ಅವರು ಈಗ ಹೇಳಿದ್ದು ಈ ರೀತಿ ಮಾತನಾಡಿ ಎಂದು ದಾರಿ ತೋರಿಸಿ ಕೊಟ್ಟಿದ್ದಾರೆ.

**ಶ್ರೀ ಎ. ರಾಮದಾಸ್** : ಕಾನೂನು ಮಂತ್ರಿಗಳು ಜೊತೆಗೆ ಆ ಕಮಿಟಿಯ ಅಧ್ಯಕ್ಷರಾಗಿ ತಾವು ಮಾನ್ಯ ಸುರೇಶ್ ಕುಮಾರ್ ಅವರನ್ನು ಕೇಳಿದಿರಿ. ಕಾಂಗ್ರೆಸ್ ಪಕ್ಷದಲ್ಲಿ ಇದ್ದಂಥವರು ಹೇಗೆ ನಾವು ಮ್ಯಾನೇಜ್‌ಮೆಂಟ್ ಪರವಾಗಿ ಇದ್ದೇವೆ ಎಂದು. ನಾನೂ ಅವತ್ತು ನ್ಯಾಯಾಲಯದಲ್ಲಿ ಇದೇ ವಾದಗಳು ನಡೆಯುತ್ತಿರುವಂತಹ ಸಂದರ್ಭದಲ್ಲಿ ನಾನೂ ನ್ಯಾಯಾಲಯದಲ್ಲಿ ಇದ್ದೆ. ಈಗ ನ್ಯಾಯಾಲಯದಿಂದ 25:75 ಬಂದಿದೆ, ಅದು ನಮ್ಮ ಸರ್ಕಾರಕ್ಕೆ ಕೀರ್ತಿ ಎಂದು ಹೇಳುತ್ತಿದ್ದೀರಲ್ಲಾ, ಆ ಕೀರ್ತಿಯನ್ನು ನೀವೇ ತೆಗೆದುಕೊಳ್ಳಿ. ಅದಕ್ಕೆ ಮೊದಲು ನಿಮ್ಮ ಅಡ್ವೊಕೇಟ್ ಜನರಲ್ ನಿಮ್ಮ ವಿಚಾರದಲ್ಲಿ ಕಾನೂನಿನ ಪರ್ಯ್ಯಾ ಒಳಗೇ ಬರುತ್ತಾರಲ್ಲಾ, ಆ ಅಡ್ವೋಕೇಟ್ ಜನರಲ್ ಇದೇ ರಾಜ್ಯದ ಹೈಕೋರ್ಟಿನಲ್ಲಿ ಸರ್ಕಾರ 50:50ಕ್ಕೆ ಒಪ್ಪಿದೆ ಎಂದು ಹೇಳಿ ಬಂದರು. ಅದಕ್ಕೆ ನಾನೇ ವಿಟ್ನೆಸ್ ಇದ್ದೇನೆ. ಇಲ್ಲ ಎಂದರೆ ನೀವು ಡಿನೈ ಮಾಡಿ. ಒಂದು ನಿಮಿಷ ನಾನು ಹೇಳಿ ಬಿಡುತ್ತೇನೆ. I will complete it.

**Sri D.B. Chandregowda :** What transpires in the Court is not a subject matter for discussion. Let us not stretch it too far.

**Sri A. Ramdas :** I was there, I was a witness for that.

**ಶ್ರೀ ಡಿ.ಬಿ. ಚಂದ್ರೇಗೌಡ** : ನೀವು ವಿಟ್ನೆಸ್ ಇರಬಹುದು, ಮತ್ತೊಂದು ಇರಬಹುದು. We are interested in what has come out from the Court. What transpires

in the Court cannot be a subject matter on the floor of the House for discussion, ನಿಮಗೆ ಅದು ಗೊತ್ತಿಲ್ಲದಿದ್ದರೆ ಬಿಟ್ಟು ಬಿಡಿ. Advocate General, if need be, is also a Member of this House. You can call him for question. But he appeared on behalf of the Government. What he submits there is a different matter. That cannot be a subject matter for discussion on the floor of this House.

**ಶ್ರೀ ಎ. ರಾಮದಾಸ್** : ಮಾನ್ಯ ಉಪಸಭಾಪತಿಯವರೇ, ಅದರಲ್ಲಿ ಕಾನೂನು ತೊಡಕು ಏನು ಇದೆ ಹೇಳಿ.

**ಉಪಾಧ್ಯಕ್ಷರು** : ನಿಮ್ಮ ಸರದಿ ಬಂದಾಗ ನೀವು ಹೇಳಿ.

**ಗೊಂದಲ**

**ಶ್ರೀ ಬಿ.ಎಚ್. ಬನ್ನಿಕೋಡ್** : ನ್ಯಾಯಾಲಯದ ನಿರ್ಣಯದ ಬಗ್ಗೆ ಇಲ್ಲಿ ಚರ್ಚೆಮಾಡುವುದಕ್ಕೆ ಅವಕಾಶ ಇದೆಯಾ?

**5.40 ಪಿ.ಎಂ**

**ಶ್ರೀ ರಾಮದಾಸ್** : ಮಾನ್ಯ ಉಪಾಧ್ಯಕ್ಷರೇ, fee structure ಬಗ್ಗೆ ಹೇಳಿದ್ದೀರಲ್ಲಾ ಅದರ ಬಗ್ಗೆ ನ್ಯಾಯಾಲಯದಿಂದ ತೀರ್ಮ ಬಂತೆಂದಯ ಹೇಳಿದಿರಾ?

**ಗೊಂದಲ**

**ಶ್ರೀ ಬಿ.ಹೆಚ್. ಬನ್ನಿಕೋಡ್** : ನ್ಯಾಯಾಲಯದ ನಿರ್ಣಯದ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಸ್. ಸುರೇಶ್ ಕುಮಾರ್** : ಸನ್ಮಾನ್ಯ ಉಪಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರಿಗೆ ಈ ಸಮಯದಲ್ಲಿ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಏಕೆಂದರೆ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಚಂದ್ರೇಗೌಡರು ನನ್ನನ್ನು ದಾರಿ ತಪ್ಪಿಸುತ್ತಾರೆ. ದಾರಿ ತಪ್ಪದಿರುವಂತೆ ನೋಡಿಕೊಳ್ಳುವ ಕೆಲಸವನ್ನು ಸಿಂಧ್ಯಾರವರು ಮಾಡುತ್ತಿದ್ದಾರೆ. ಈಗ ನಾನು ಪ್ರಸ್ತಾಪಿಸುವ ಅಂಶವೇನೆಂದರೆ, ತಾವು 75:25 ಘೋಷಿಸಿದಿರಿ. ಅದನ್ನು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯ ಅಂದು ಎತ್ತಿ ಹಿಡಿಯಿತು. That was on 30th June. ಆದರೆ, ಅದರಿಂದ ಸಮಾಧಾನವಾಗಿದೆ... ಮತ್ತು 'ನಿಮ್ಮವರು' ಎಂದರೆ ಕೋಪ ಬರುತ್ತದೆ. ಕಾಮೆಡ್-ಕೆ ಅವರು they approached Supreme Court on 3rd July. Supreme Court fortunately refused to stay the High Court Order. ಅವರು Fortunately for us, they refused to give a stay. But on that day 3rd July ನಮ್ಮ ಹೆಮ್ಮೆಯ ರಾಜ್ಯ ಸರ್ಕಾರ If, I am wrong, please correct me, on 3rd July ನಮ್ಮ ಹೆಮ್ಮೆಯ ರಾಜ್ಯ ಸರ್ಕಾರ ಸುಪ್ರಿಂಕೋರ್ಟ್ ಮುಂದೆ ಕೇವಿಯಟ್ ಫೈಲ್ ಮಾಡಿರಲಿಲ್ಲ. ಅಕಸ್ಮಾತ್ ಸುಪ್ರಿಂಕೋರ್ಟ್ ಏನಾದರೂ

ಸ್ಟೇ ಕೊಟ್ಟಿದ್ದರೆ ಏನು ಮಾಡುತ್ತಿದ್ದೀರಿ? 30ನೇ ತಾರೀಖು ಹೈಕೋರ್ಟ್ ಆಪ್‌ಹೆಲ್ಡ್ ಮಾಡಿದಾಗ The least you could have done, was to file a caveat ನಾಳೆ ನಾವು ಕೇವಿಯಟ್ ಫೈಲ್ ಮಾಡುತ್ತೇವೆಂದು ಸುಪ್ರಿಂ ಕೋರ್ಟ್ ಮುಂದೆ ಹೇಳುವುದು... ಇದರಿಂದಲೇ ನಮಗೆ....

**ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ** : ಅದಕ್ಕೋಸ್ಕರವೇ ಹೇಳಿದ್ದು; ನೀವು ಮ್ಯಾನೇಜ್‌ಮೆಂಟ್ ಪರ ಇದ್ದೀರೆನ್ನುವುದಕ್ಕೆ ಕೇವಿಯಟ್ ಹಾಕದಿರುವ ಒಂದೇ ವಿಚಾರ ಸಾಕು. ಅದನ್ನು ಒಪ್ಪಿಕೊಳ್ಳಲೇಬೇಕು. ನೀವು ಅವೊತ್ತು ಕೇವಿಯಟ್ ಹಾಕಿದ್ದರೆ ನೀವು ನಿಜವಾಗಿಯೂ ಮ್ಯಾನೇಜ್‌ಮೆಂಟ್ ಪರ ಇಲ್ಲವೆಂದು ಸಾಬೀತಾಗುತ್ತಿತ್ತು.

**ಶ್ರೀ ಡಿ.ಬಿ. ಚಂದ್ರೇಗೌಡ** : ನೀವು ನಿಮ್ಮ ಮೂಗಿನ ನೇರಕ್ಕೇ ಮಾತಾಡುತ್ತಾ ಹೋಗಬೇಡಿ. This is not the bedate. ಅವರು ಮಾತನಾಡುತ್ತಿದ್ದಾರೆ, ಮಾತನಾಡಲಿ. ಅನಂತರ, ಉತ್ತರ ಕೊಡುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ್** : ಚಂದ್ರೇಗೌಡರ ಎರಡು role ಅನ್ನು ನಾನು ನೋಡುತ್ತೇನೆ. ತಾವು ಆ ಕಮಿಟಿಯಲ್ಲಿ you strived ಬಹಳ ಒಳ್ಳೆಯ ಕೆಲಸ ಮಾಡಿ ಇದನ್ನು ತಂದಿದ್ದೀರಿ. ಆದರೆ, ಇಲ್ಲಿ ಬೇರೆ role ಮಾಡುತ್ತಿದ್ದೀರಿ, ಅದಕ್ಕೋಸ್ಕರ ನಾನು ನಿಮಗೆ ಧನ್ಯವಾದಗಳನ್ನರ್ಪಿಸುತ್ತೇನೆ! ಏತಕ್ಕೆ ಸುಮ್ಮಸುಮ್ಮನೆ unnecessarily, you are becoming cage. ಅಗತ್ಯವಿಲ್ಲ, ನನ್ನ ಪ್ರಶ್ನೆ ಅಷ್ಟೆ. ಜೂನ್ 30ನೇ ತಾರೀಖಿನಂದು ರಾಜ್ಯ ಉಚ್ಚ ನ್ಯಾಯಾಲಯ ನಮ್ಮ 75:25 ಅನ್ನು ಎತ್ತಿ ಹಿಡಿಯಿತು. 75:25 ಎಂದು ನೀವು ಮಾಡಿದ್ದರ ಬಗ್ಗೆ ನನಗೆ ಕೋಪ ಇದೆ. ಅದನ್ನು 85:15 ಮಾಡಬಹುದಾಗಿತ್ತು. ಆಗಲೂ ಕೂಡ ನೀವು confident ಆಗಿ ಇರಬಹುದಾಗಿತ್ತು. ಹೈಕೋರ್ಟ್‌ನಲ್ಲಿ ಒಂದು ಸಲ ಅವರು ಅಪ್‌ಹೆಲ್ಡ್ ಮಾಡಿದಾಗ, ಅವೊತ್ತು ಕಾಮೆಡ್--ಕೆ ಅವರು ಹೊರಗಡೆ ಒಂದು "ನಾವು ಇದನ್ನು ಇಲ್ಲಿಗೇ ನಿಲ್ಲಿಸುವುದಿಲ್ಲ, ಸುಪ್ರಿಂ ಕೋರ್ಟ್‌ಗೆ ಹೋಗುತ್ತೇವೆ" ಎಂದು ಪ್ರೆಸ್ ಮುಖಾಂತರ, ಎಲೆಕ್ಟ್ರಾನಿಕ್ ಮೀಡಿಯಾ ಮುಖಾಂತರ ಹೇಳಿದ ನಂತರವೂ ರಾಜ್ಯ ಸರ್ಕಾರ ಸುಪ್ರಿಂ ಕೋರ್ಟ್ ಮುಂದೆ ಕೇವಿಯಟ್ ಸಲ್ಲಿಸದಿರುವುದಕ್ಕೆ ಬಹಳ ಸರಳವಾದ ಕಾರಣವೇನು ಎಂಬುದು ನನಗೆ ಬೇಕು. ಇವೆಲ್ಲಾ ಚೆನ್ನಾಗಿರುತ್ತದೆ. playing to the galleries, we were sure of success we are sure of ourselves. ಅವೆಲ್ಲಾ ಚೆನ್ನಾಗಿರುತ್ತದೆ. ಆದರೆ, ರಾಜ್ಯ ಸರ್ಕಾರ....

**Sri D.B. Chandre Gowda :** ಬರೀ ಮಾತನಾಡುವುದು. You are also playing to the gallery. ತುಂಬಾ ಚೆನ್ನಾಗಿದೆ.

**ಶ್ರೀ ಎಸ್. ಸುರೇಶ್‌ಕುಮಾರ್** : ರಾಜ್ಯ ಸರ್ಕಾರ ಮಾಡಬೇಕಾದ ಕೆಲಸವೇನೆಂದರೆ, ಕೇವಿಯಟ್ ಹಾಕಬೇಕಾಗಿತ್ತು. ನಮ್ಮ ಆತಂಕವೇನೆಂದರೆ, ಅಕಸ್ಮಾತ್ ಸ್ಟೇ ಕೊಟ್ಟಿದ್ದರೆ ಏನಾಗುತ್ತಿತ್ತು? ಇನ್ನು ಎಷ್ಟು ದಿವಸ ಮುಂದೆ ತಳ್ಳುತ್ತಿದ್ದರು? ಏನು ಕತೆಯಾಗುತ್ತಿತ್ತು? ಸರ್ಕಾರ ತನ್ನ ಜವಾಬ್ದಾರಿಯನ್ನು

ಮರೆತು, ಮೈಮರೆತು ಮಲಗಿದರೆ ಈ ರೀತಿ ಆಗುತ್ತದೆ. ಅಂದರೆ, ಕೇವಿಯಟ್ ಹಾಕದಿರುವುದೇ ತಪ್ಪೆಂದು ನಾನು ಹೇಳುತ್ತಿದ್ದೇನೆ. ಇದು ಬಹಳ very serious lapse ಇದರಿಂದ ನಿಮ್ಮ ಬಗ್ಗೆ ನಮಗೆ ಅನುಮಾನವೇನಿದೆ, ಅದು ಮತ್ತಷ್ಟು ಬಲವಾಗುತ್ತಾ ಹೋಗುತ್ತಿದೆ. ವಿದ್ಯಾರ್ಥಿಗಳು ಮತ್ತು ಮ್ಯೂನೇಜ್‌ಮೆಂಟ್ ಇವೆರಡೆ ವಿಚಾರಗಳನ್ನು ಸರ್ಕಾರದ ಮುಂದಿಟ್ಟಾಗ ಸಹಜವಾಗಿ ಮ್ಯಾನೇಜ್‌ಮೆಂಟ್ ಕಡೆಗೇ ನಿಮ್ಮ ತಕ್ಕಡಿ ವಾಲುತ್ತಿತ್ತು. ಅದಕ್ಕೋಸ್ಕರವೇ ನೀವು ಕೇವಿಯಟ್ ಹಾಕಲಿಲ್ಲ. ಕೇವಿಯಟ್ ಹಾಕಿದ್ದರೆ ಏನೂ ಆಗುತ್ತಿರಲಿಲ್ಲ, ಕೇವಿಯಟ್ ಹಾಕಬೇಕಾಗಿತ್ತು, ಹಾಕಲಿಲ್ಲ, It is a serious lapse on the part of the State Government, ಕೊನೆಯದಾಗಿ, ನಾನು ಎರಡು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ. ಸತತವಾಗಿ ನೀವು ಎಲ್ಲೆಲ್ಲಿ ತಪ್ಪು ಹೆಜ್ಜೆಗಳನ್ನು ಇಟ್ಟಿದ್ದೀರೆಂಬುದರ ಬಗ್ಗೆ ನಾನು ಸದನದ ಗಮನಕ್ಕೆ ತರುತ್ತೇನೆ. ಮೊದಲನೆಯದಾಗಿ, ಶಾಸನ ಸಭೆಯಲ್ಲಿ ಶಾಸನ ರಚಿಸದಿರುವುದು ಒಂದು ತಪ್ಪು ಹೆಜ್ಜೆ ಎಂದು ನಾವು ಸತತವಾಗಿ ಹೇಳುತ್ತಾ ಬಂದಿದ್ದೇವೆ. ಶಾಸನ ರಚಿಸಬೇಕಾಗಿತ್ತು. legislation ಮಾಡಬೇಕಾಗಿತ್ತೆಂದು ನಾವು ಮಾರ್ಚಿ ಹತ್ತನೇ ತಾರೀಖಿನಿಂದ ಹೇಳುತ್ತಾ ಬಂದಿದ್ದೇವೆ.

**Sri D.B. Chandre Gowda :** As against the Judgement of the Supreme Court?

**ಶ್ರೀ ಎಸ್. ಸುರೇಶ್‌ಕುಮಾರ್** : ಮಾರ್ಚಿ ಹತ್ತರಂದು ಹೈಕೋರ್ಟ್ ಜಡ್ಜ್‌ಮೆಂಟ್ ಬಂದಿತ್ತೇ? ನಾನೊಬ್ಬನೇ ಅಲ್ಲ, ಸಾಕಷ್ಟು ಜನರು ಹೇಳಿದ್ದಾರೆ. ಅದು ಸರಿಯೇ? ತಪ್ಪೇ ಎಂಬ ಬಗ್ಗೆ ನೀವು ಉತ್ತರ ಕೊಡುವಾಗ ದಯವಿಟ್ಟು ತಿಳಿಸಿ. ಎರಡನೆಯದಾಗಿ, ಕೆಲವು ವಿಚಾರಗಳನ್ನು ಗೆಳೆಯ ರಾಮದಾಸ್ ರವರು ಸದನದ ಮುಂದಿಟ್ಟರು. ವಿದ್ಯಾರ್ಥಿಗಳ ಹಿತ ಕಾಪಾಡುವ ದಿಸೆಯಲ್ಲಿ ವಾದವನ್ನು ಸರಿಯಾಗಿ ಮಂಡನೆ ಮಾಡದಿರುವುದು. for which, our State is very famous and very notorious. ಅದು ಕಾವೇರಿ ವಿಚಾರ ಇರಬಹುದು, ಬೇರೆ ಪ್ರಸಂಗಗಳನ್ನೂ ನೋಡಿದ್ದೇವೆ. ನಮ್ಮ ಕೇಸ್‌ಗಳ ಬಗ್ಗೆ ಸರಿಯಾಗಿ ವಾದ ಮಾಡುವುದಿಲ್ಲ. ಮೂರನೆಯದಾಗಿ, "ಏಕರೂಪ ಶುಲ್ಕವನ್ನು ನಿಗದಿಪಡಿಸುವುದಿಲ್ಲ"ವೆಂಬ ಭರವಸೆಯನ್ನು ನೀವು ಸತತವಾಗಿ ಕೊಡುತ್ತಾ ಬಂದಿರಿ. ಆಯಾ ಕಾಲೇಜುಗಳ ಇನ್‌ಫ್ರಾಸ್ಟ್ರಕ್ಚರ್ ಮತ್ತು ಪರಿಸ್ಥಿತಿ ಗಮನಿಸಿ ನಾವು ಶುಲ್ಕ ನಿಗದಿಪಡಿಸುತ್ತೇವೆಂದು ಹೇಳುತ್ತಾ ಬಂದಿರಿ. ಆದರೆ, ನೀವು ಕೊಟ್ಟಿರುವ ಭರವಸೆಯನ್ನು ಹುಸಿಗೊಳಿಸುವ ಮೂಲಕ, ಅದನ್ನು ಪಕ್ಕಕ್ಕೆ ತಳ್ಳಿ ಇವೊತ್ತು ಏಕರೂಪ ಶುಲ್ಕ ನಿಗದಿಯನ್ನು ಒಪ್ಪಿಕೊಂಡಿದ್ದೀರಿ. ಹಳೆಯ ಶುಲ್ಕ ನಿಗದಿಯನ್ನು ನೀವು ಸಮರ್ಥಿಸಿಕೊಳ್ಳಲಿಲ್ಲ. ಸಾಮಾಜಿಕ ನ್ಯಾಯದ ರಕ್ಷಣೆ ಮಾಡುತ್ತೇವೆಂದು ಘೋಷಣೆ ಮಾತ್ರ ಮಾಡಿ, ಬಡ, ಪ್ರತಿಭಾನ್ವಿತ ಇತರೇ ಹಿಂದುಳಿದ ವಿದ್ಯಾರ್ಥಿಗಳಿಗೆ ಇವೊತ್ತು ರಾಜ್ಯ ಸರ್ಕಾರ ಅಸಹಕಾರ ನೀಡಿದೆ. ಮತ್ತು ಹೈಕೋರ್ಟ್ ಹೇಳಿರುವ ಶುಲ್ಕದ ನೀತಿಯ ವಿರುದ್ಧ ತಾವು ಸುಪ್ರಿಂ ಕೋರ್ಟ್‌ಗೆ ಹೋಗದಿರುವುದು. ಇದು ನಾನು ತಮ್ಮ ವರ್ತನೆಯಲ್ಲಿ ಕಂಡಿರುವ ತಪ್ಪು ಹೆಜ್ಜೆಗಳು. ಇದರ ಬಗ್ಗೆ ನಿಮ್ಮ ಸಲಹೆಗಳೇನು? ನಾವೂ ನಿಮ್ಮ ಜೊತೆ ಇರುತ್ತೇವೆಂದು ಸನ್ಮಾನ್ಯ

ಸಚಿವರು ಮೇಲಿಂದ ಮೇಲೆ ಕೇಳುತ್ತಿದ್ದಾರೆ. ಈ ಕುರಿತಂತೆ ನಮ್ಮ ಸಲಹೆಗಳೇನೆಂದರೆ, ಮೊದಲನೆಯದು, ಶೇಕಡ ನಲವತ್ತೆರಷ್ಟು ಮೆರಿಟ್ ವಿದ್ಯಾರ್ಥಿಗಳೇನಿದ್ದಾರೆ. ಅವರಿಗೆ ನೀವು ಕಳೆದ ವರ್ಷದಷ್ಟೇ ಶುಲ್ಕ ನಿಗದಿಪಡಿಸಬೇಕು. It is the duty of the State Government ಇಲ್ಲಿದಿದ್ದರೆ ಏನಾಗುತ್ತದೆಂದರೆ, ನರ್ಸಿಂಗ್ ಹೋಮ್‌ಗಳಲ್ಲಿ ಶಿಶು ಮಾರಾಟ ಪ್ರಸಂಗಗಳು ಜಾಸ್ತಿಯಾಗುತ್ತದೆ. ಹೆಣಗಳು ಮಾರಾಟವಾಗುವ ಪ್ರಸಂಗಗಳೂ ಕೂಡ ಜಾಸ್ತಿಯಾಗುತ್ತದೆ. ಎರಡನೆಯದಾಗಿ, ಈಗಲಾದರೂ ಶುಲ್ಕ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಬೇಕು, ಮೂರನೆಯದಾಗಿ, ಏಕರೂಪ ಶುಲ್ಕ ನಿಗದಿಗೊಳಿಸದೆ ಕಾಲೇಜು ಆಧಾರಿತ ಶುಲ್ಕ ನಿಗದಿಪಡಿಸಬೇಕು. ದುಬಾರಿ ಶುಲ್ಕವೇನಿದೆ, ಅದನ್ನು ಯಾವುದೇ ಕಾರಣದಿಂದ ವಿದ್ಯಾರ್ಥಿಗಳು ಭರಿಸುವುದಕ್ಕಾಗುವುದಿಲ್ಲ, ಅದನ್ನು ಸಮಾಜ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಕಳೆದ ಸಲ ನಾನು ಮಾತನಾಡುತ್ತಾ ಹೇಳಿದ್ದೆ. ಎಲ್ಲಾ ಕಾಲೇಜುಗಳಲ್ಲಿ ಬೋರ್ಡ್ ಹಾಕುತ್ತಾರೆ. If you have got merit, you please get out, if you have got credit card please enter ಎಂದು ಅಂತಹ ಪರಿಸ್ಥಿತಿ ಬರುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ಶುಲ್ಕ ನಿಯಂತ್ರಣ ಸಮಿತಿಯಲ್ಲಿ ರಾಜಕಾರಣಿಗಳನ್ನು ಕೈಬಿಟ್ಟು, ಮ್ಯಾನೇಜ್‌ಮೆಂಟ್‌ನವರೂ ಇರುವುದು ಬೇಡ. ಕೇವಲ ಶಿಕ್ಷಣ ತಜ್ಞರನ್ನೊಳಗೊಂಡಿರುವ ಸಮಿತಿ ರಚಿಸಿ. ಯಾವುದೇ ಕಾರಣಕ್ಕೂ ನಿಮ್ಮ ಕಾಲದಲ್ಲಿ ಮೆರಿಟ್ ಅನ್ನು ಬಲಿ ಕೊಡಬೇಡಿ. ಇಂತಹ ಒಂದು ಪರಿಸ್ಥಿತಿ ಬಂತೆಂದು ನಿಮಗೆ ಕೆಟ್ಟ ಹೆಸರು ಬರುವುದು ಬೇಡ. ವೈದ್ಯಕೀಯ ರಂಗ by the people, for the people, of the people ಎಂದು ಹೇಳುವಂತೆ, ಹಣ ಇರುವವರ ಹಣ ಇರುವವರಿಂದ, ಹಣ ಇರುವವರಿಗಾಗಿ ಆಗಬಾರದು. ಹಣ ಇಲ್ಲದಿದ್ದರೂ ಕೂಡ ಇವತ್ತು ಸಾಮಾಜಕ್ಕೆ ಸೇವೆ ಮಾಡತಕ್ಕವರು ಮತ್ತು ಪ್ರತಿಭೆ ಇರುವವರಿಗೆ ಅವಕಾಶ ಸಿಗುವಂತೆ ಮಾಡಿ. ರಾಜ್ಯ ಸರ್ಕಾರಕ್ಕೆ ನನ್ನದೊಂದು ಸಲಹೆ. ಹೊಸದಾಗಿ ಏನಾದರೂ ಕೂಡ.. ನಿಮಗೆ ಸ್ಕಾಲರ್‌ಶಿಫ್ ಕೊಡಿಸಲು ಆಗುತ್ತದೆಯೇ? Rural Medicare Scholarship.. ಇವತ್ತು ಹಳ್ಳಿಗಳಲ್ಲಿ ಕೆಲಸ ಮಾಡಲು ಯಾವುದೇ ವೈದ್ಯರು ತಯಾರಿಲ. ಯಾರೂ ಕೂಡ ವೈದ್ಯರು ಹೋಗುತ್ತಿಲ್ಲ. ಇವತ್ತು CET ಯಲ್ಲಿ ಪಾಸಾದ ಹುಡುಗರು if they come forward ನಾವು ನಮ್ಮ ವಿದ್ಯಾಭ್ಯಾಸದ ನಂತರ we will serve in villages ಎಂದು ಮುಂದೆ ಬಂದರೆ ದಯವಿಟ್ಟು ಅವರಿಗೆ Rural Medicare scholarship ನ್ನು ಕೊಡಿ. ನಮ್ಮ ಗ್ರಾಮಾಂತರ ಪ್ರದೇಶಕ್ಕೂ ದುಬಾರಿ ಡಾಕ್ಟರ್ ಬೇಕಾಗಿಲ್ಲ. ಪ್ರಾಣವನ್ನು ಉಳಿಸುವ ನೋವನ್ನು ನಿವಾರಿಸುವ ವೈದ್ಯರು ಬೇಕಾಗಿದ್ದಾರೆ. ಅವರ ಹಿತವನ್ನು ರಕ್ಷಿಸಬೇಕು. ಒಟ್ಟಿನಲ್ಲಿ ತಮಗೆ ಈಗ ಒಂದು ಅವಕಾಶವಿದೆ. ತಾವು ಮಾಡಿರುವ ಪ್ರಮಾದಗಳು, ತಪ್ಪುಗಳೇನಿದೆ ಅದನ್ನೆಲ್ಲಾ ತಿದ್ದಲು ಈ ಕೆಲವು ಸಲಹೆಗಳನ್ನೇನು ಇಟ್ಟಿದ್ದೇನೆ. ಅದನ್ನು ನೀವು ಅನುಷ್ಟಾನಕ್ಕೆ ತರಬೇಕು. ಇವತ್ತು ಫೀಸ್‌ನ ಬಗ್ಗೆ ಸುಪ್ರೀಮ್‌ಕೋರ್ಟ್‌ನಿಂದ ಏನಾದರೂ ತಿರ್ಮಾನ ಬರಲಿ. ಆದರೆ, ರಾಜ್ಯ ಸರ್ಕಾರ ಈ ಸದನದ ಮೂಲಕ ವಿದ್ಯಾರ್ಥಿಗಳಿಗೆ ಭರವಸೆಯೊಂದನ್ನು ಕಳುಹಿಸಬೇಕು. Medical field ನಾವು prohibitive field ಮಾಡುವುದಿಲ್ಲ.

ಇಲ್ಲೂ ಕೂಡ ನಾವು ಯಾರಿಗೆ ಅರ್ಹತೆ ಇದೆ ಅವರಿಗೆ ಓದಲು ಅವಕಾಶ ಕೊಡುತ್ತೇವೆ. ಅವರಿಗೆ ಅಗತ್ಯ ಬಿದ್ದರೆ ನಾವು ಸಬ್ಸಿಡಿ ಕೊಟ್ಟು ಓದಿಸುತ್ತೇವೆ. ಸ್ಕಾಲರ್‌ಶಿಪ್ ಕೊಡುತ್ತೇವೆ. ಈ ಭರವಸೆಯನ್ನು ರಾಜ್ಯ ಸರ್ಕಾರ ದಯವಿಟ್ಟು ಕೊಡಬೇಕು. ಕರ್ನಾಟಕ ಕೇವಲ ಹಣದಿಂದ ಡಾಕ್ಟರ್‌ಗಳಾಗಿ ಹೃದಯವನ್ನು ಎಲ್ಲೋ ಹುಡುಕಿ ಆಪರೇಷನ್ ಮಾಡುವ ಪರಿಸ್ಥಿತಿ ಬರಬಾರದು ಎಂದು ನಾನು ಮತ್ತೊಮ್ಮೆ ಕೇಳಿಕೊಂಡು, ನನ್ನ ಈ ಕೆಲವು ವಿಚಾರಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಉಪಾಧ್ಯಕ್ಷರು** : ಈಗ ಪ್ರಶ್ನೋತ್ತರ.

## 4. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು

**ಕುಮಟಾ ಮತ್ತು ಹೊನ್ನಾವರ ಪಟ್ಟಣಗಳಲ್ಲಿ ರಂಗಮಂದಿರ ನಿರ್ಮಾಣ**

601 (5293) : ಶ್ರೀ ಮೋಹನ್. ಕೆ. ಶೆಟ್ಟಿ (ಕುಮಟ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರವು ಜಾನಪದ, ಯಕ್ಷಗಾನ ಮುಂತಾದ ಕಲೆಯ ಬೇಡಾಗಿದ್ದು ಕುಮಟಾ ಮತ್ತು ಹೊನ್ನಾವರ ಪಟ್ಟಗಳಲ್ಲಿ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಒಂದೂ ರಂಗ ಮಂದಿರವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ರಂಗಮಂದಿರ ನಿರ್ಮಾಣಕ್ಕಾಗಿ ಏನು ಕ್ರಮ ಕೈಗೊಂಡಿದೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯವರು)

ಅ) ಹೌದು.

ಆ) 1. ಇಲಾಖೆಯಲ್ಲಿ ಬಯಲುರಂಗಮಂದಿರದ ಯೋಜನೆ ಜಾರಿಯಲ್ಲಿದೆ.

2. ಕುಮಟಾ ಪಟ್ಟಣದಲ್ಲಿ ಬಯಲುರಂಗಮಂದಿರ ನಿರ್ಮಿಸಲು 50,000–00 ರೂ.ಗಳನ್ನು 1991 ರಲ್ಲಿ ಬಿಡುಗಡೆ ಮಾಡಿದೆ.

3. ಬಯಲು ರಂಗಮಂದಿರ 1995 ರಲ್ಲಿ ಉದ್ಘಾಟನೆಯಾಗಿದೆ.

4. ಹೊನ್ನಾವರ ಪಟ್ಟಣದಲ್ಲಿ ಬಯಲು ರಂಗಮಂದಿರ ನಿರ್ಮಾಣಕ್ಕೆ ಯಾವುದೇ ಬೇಡಿಕೆ ಬಂದಿಲ್ಲ.

**ಶ್ರೀ ಮೋಹನ್ ಕೆ. ಶೆಟ್ಟಿ** : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವೆಯರು ಉತ್ತರವನ್ನು ಕೊಟ್ಟಿದ್ದಾರೆ. ಇಲಾಖೆಯಲ್ಲಿ ಬಯಲು ರಂಗ ಮಂದಿರದ ಯೋಜನೆ ಜಾರಿಯಲ್ಲಿದೆ. ಹಾಗೂ ಬಯಲು ರಂಗ ಮಂದಿರ ಕುಮಟಾದಲ್ಲಿ ನಿರ್ಮಿಸಲು ಐವತ್ತು ಸಾವಿರ ರೂಪಾಯಿಗಳನ್ನು 1991 ರಲ್ಲಿ ಬಿಡುಗಡೆ ಮಾಡಿದೆ. ಬಯಲು ರಂಗ ಮಂದಿರ 1995 ರಲ್ಲಿ ಉದ್ಘಾಟನೆಯಾಗಿದೆ. ಹೊನ್ನಾವರ ಪಟ್ಟಣದಲ್ಲಿ ಬಯಲು ರಂಗ ಮಂದಿರದ ನಿರ್ಮಾಣಕ್ಕೆ ಯಾವುದೇ ಬೇಡಿಕೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದರೆ, ಅವರದ್ದು ಬಯಲು ರಂಗ ಮಂದಿರದ ಯೋಜನೆ ಇರಬಹುದು. ಆದರೆ, ಇದು ಹಳೆಯ ಪದ್ಧತಿಯಾಗಿದೆ. ಏಕೆಂದರೆ, ಬಯಲು ರಂಗ ಮಂದಿರ ಇದ್ದರೆ.. ನಮ್ಮ